ವಿಜಯಪುರ | ಸಂಪುಟ 04 | ಸಂಚಿಕೆ 217 | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಬುಧವಾರ, ಅಕ್ಟೋಬರ್ 21, 2026

"ಆರ್.ಎಲ್.ಜಾಲಪ್ಪ ಅವರಿಗೆ ನನ್ನನ್ನು ಸಿಎಂ ಮಾಡಲೇಬೇಕೆಂಬ ಮಹದಾಸೆ ಇತ್ತು.1996ರಲ್ಲಿ ಎಚ್.ಡಿ.ದೇವೇಗೌಡರು ಪ್ರಧಾನಮಂತ್ರಿ ಆದಾಗ ನನ್ನನ್ನೇ ಸಿಎಂ ಮಾಡಿ ಎಂದು ಸಲಹೆ ಕೊಟ್ಟಿದ್ದರು. ಮುಂದೆ ಕಾಂಗ್ರೆಸ್ ಪಕ್ಷಕ್ಕೆ ನನ್ನನ್ನು ಸೇರಿಸಿಕೊಳ್ಳಲು ಸೋನಿಯ ಗಾಂಧಿ ಅವರಿಗೆ ಅವರೇ ಪತ್ರ ಬರೆದಿದ್ದರು."



■ ಸಿದ್ದರಾಮಯ್ಯ
ಮಾಜಿ ಮುಖ್ಯಮಂತ್ರಿ

# ನನ್ನ ಕಳಂಕ ರಹಿತ ಚಾರಿತ್ರ್ಯಕ್ಕೆ ಧಕ್ಕೆ

## ಸಂಚಿನ ಹಿಂದಿರುವ ಸೂತ್ರಧಾರರಿಗೆ ದುರ್ಗಾದೇವಿಯಿಂದಲೇ ತಕ್ಕ ಶಾಸ್ತಿ | ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ ಸ್ಪಷ್ಟನೆ



ಬೆಂಗಳೂರು: ಪವಿತ್ರ ನವರಾತ್ರಿಯ ದಿನಗಳಲ್ಲಿ ಖಾಸಗಿ ಸುದ್ದಿ ವಾಹಿನಿಯೊಂದರ ಮುಖ್ಯಸ್ಥರು ನನ್ನ ವಿರುದ್ಧ ಮಾಡಿರುವ ಆರೋಪಗಳು ಸಂಪೂರ್ಣ ಸತ್ಯಕ್ಕೆ ದೂರವಾದದ್ದು, ಸಂಪೂರ್ಣ ಕಟ್ಟುಕಥೆ ಮತ್ತು ದುರುದ್ದೇಶಪೂರಿತ ಸೃಷ್ಟಿ ಎಂದು ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ ಮಂಗಳವಾರ ಸ್ಪಷ್ಟನೆ ನೀಡಿದ್ದಾರೆ.

ತಮ್ಮ ಎಕ್ಸ್ ನಲ್ಲಿ ಪೋಸ್ಟ್ ಹಾಕಿರುವ ಅವರು, ಸುದೀರ್ಘ ಕಾಲದಿಂದ ಸಾರ್ವಜನಿಕ ಜೀವನದಲ್ಲಿರುವ ನನ್ನ ಕಳಂಕ ರಹಿತ ಚಾರಿತ್ರ್ಯಕ್ಕೆ ಧಕ್ಕೆ ತರಲು ಧರ್ಮ ಮತ್ತು ಸತ್ಯದ ಹಬ್ಬವಾದ ನವರಾತ್ರಿಯ ಸಂದರ್ಭದಲ್ಲೇ ಇಂತಹ ತೀರಾ ಕೀಳುಮಟ್ಟದ, ದುರುದ್ದೇಶ ಪ್ರೇರಿತ ನಿಂದನೆಗಿಳಿದಿರುವುದಕ್ಕೆ ನನ್ನ ಧಿಕ್ಕಾರವಿದೆ. ಸತ್ಯವನ್ನು ಎಂದಿಗೂ ಮುಚ್ಚಿಡಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಈ ರೀತಿಯ ಚಾರಿತ್ರ್ಯವಧೆ ಹಾಗೂ ಕಲ್ಪಿತ ಸಂಚಿನ ಹಿಂದೆ ಇರುವ ಸೂತ್ರಧಾರರಿಗೂ ಮತ್ತು ಅದನ್ನು ಕಾರ್ಯರೂಪಕ್ಕೆ ತಂದವರಿಗೂ ಆ ಜಗನ್ಮಾತೆ ದುರ್ಗಾದೇವಿಯೇ ತಕ್ಕ ಶಾಸ್ತಿ ಮಾಡಲಿದ್ದಾಳೆ. ಈ ಅಧರ್ಮಕ್ಕೆ ತಾಯಿ ದುರ್ಗೆಯ ದಂಡನೆಯೇ ಅಂತಿಮ ಉತ್ತರ ಎಂದು ಅನಿತಾ ಕುಮಾರಸ್ವಾಮಿ ಪ್ರತಿಕ್ರಿಯೆ ನೀಡಿದ್ದಾರೆ.

# ತುಳಜಾಪುರ ಪಾದಯಾತ್ರಾರ್ತಿಗಳಿಗೆ ದಾಸೋಹ ಸೇವೆ




■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ಈ ವರ್ಷ ಮಳೆ ಇಲ್ಲದೆ ತೀವ್ರ ಬರಗಾಲ ಇರುವದರಿಂದ ಕುಡಿಯುವ ನೀರಿಗೂ ಸಮಸ್ಯೆ ಎದುರಾಗಿದ್ದು ಇದರಿಂದ ಮಹಾರಾಷ್ಟ್ರದ ತುಳಜಾಪುರದ ಅಂಬಾಭವಾನಿ ದರ್ಶನಕೆ ತೆರಳುವ ಪಾದಯಾತ್ರಿಕರಿಗೆ ಮತ್ತು ಅಲ್ಲಲ್ಲಿ ದಾಸೋ ವ್ಯವಸ್ಥೆ ಮಾಡುವವರಿಗೆ ನೀರಿನ ಸಮಸ್ಯೆ ಕಂಡು ಬಂದಿದ್ದು ಮುಂಚಿತವಾಗಿ ಪರಿಶೀಲಿಸಿ ಪ್ರತಿ ವರ್ಷದಂತೆ ದಾಸೋಹ ಹಾಗೂ ಉಚಿತ ಆರೋಗ್ಯ ಸೇವೆ ಮಾಡಲಾಗುವುದು ಎಂದು ಬಿಜೆಪಿ ಜಿಲ್ಲಾ ಯುವ ಮೋರ್ಚಾ ಮಾಜಿ ಅಧ್ಯಕ್ಷ ಬಸವರಾಜ ಹೂಗಾರ ಹೇಳಿದರು.

ಭಾನುವಾರ ಆಲಮೇಲ ಪಟ್ಟಣದ ತುಳಜಾಪುರದ ಪಾದಯಾತ್ರಿಕರಿಗೆ ದಾಸೋಹ ಕಮಿಟಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡುತ್ತ ಹೇಳಿದರು.

ತುಳಜಾಪುರದ ಶ್ರೀ ಅಂಬಾಭವಾನಿ ದೇವಿಯ ದರ್ಶನಕ್ಕಾಗಿ ಪಾದಯಾತ್ರೆ ಕೈಗೊಳ್ಳುವ ಭಕ್ತಾದಿಗಳ ಅನುಕೂಲಕ್ಕಾಗಿ ಆಲಮೇಲ ಪಟ್ಟಣದ ವಿವಿಧ ಸಂಘ-ಸಂಸ್ಥೆಗಳು, ದಾಸೋಹ ಸಮಿತಿಗಳು ಹಾಗೂ ಗೆಳೆಯರ ಬಳಗದವತಿಯಿಂದ ತುಳಜಾಪುರ ಮಾರ್ಗದಲ್ಲಿ ದಾಸೋಹ ಮತ್ತು ಉಚಿತ ವೈದ್ಯಕೀಯ ಸೇವೆಗಳನ್ನು ಕಲ್ಪಿಸಲಾಗುತ್ತಿದೆ.

ಭಕ್ತಾದಿಗಳ ಪ್ರಯಾಣದ ಆಯಾಸವನ್ನು ಕಡಿಮೆ ಮಾಡಿ, ಪ್ರಾರಂಭದಲ್ಲಿ ಇಂಡಿ ರೈಲ್ವೆ ನಿಲ್ದಾಣದಿಂದ ಸುಮಾರು 3 ಕಿ.ಮೀ. ಅಂತರದಲ್ಲಿ ಆಲಮೇಲದ ಸಂಗಮೇಶ್ವರ ಮೆಡಿಕಲ್ ಸ್ಟೋರ್ಸ್ ನವರು ಉಚಿತ ವೈದ್ಯಕೀಯ ಸೇವೆ ಮತ್ತು ಎದುರುಗಡೆ ಜೈ ಭವಾನಿ ಬಸ್ ಸ್ಟಾಂಡ್ ಗೆಳೆಯರಬಳಗದಾಸೋಹಹಮ್ಮಿಕೊಳ್ಳಲಾಗಿದೆ.

ಇಂಡಿ ತಾಲೂಕಿನ ಹಲಸಂಗಿಯಿಂದ ಸುಮಾರು 1 ಕಿ.ಮೀ. ಅಂತರದಲ್ಲಿ ಆಲಮೇಲದ ಕನಸು ಫೌಂಡೇಶನ್ ಉಚಿತ ವೈದ್ಯಕೀಯ ಸೇವೆ. ಹಲಸಂಗಿ ಕ್ರಾಸ್, ಹೈವೇ ಪಕ್ಕದಲ್ಲಿ, ವಿರಾಮ್ ಹೋಟೆಲ್ ಎದುರಿಗೆ ಆಲಮೇಲ ಅಂಬಾಭವಾನಿ ದಾಸೋಹ ಕಮಿಟಿ ದಾಸೋಹ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಸೋಲಾಪುರದಿಂದ ತುಳಜಾಪುರ ಮಾರ್ಗದಲ್ಲಿ ಸೋಲಾಪುರ ಸಮೀಪ ಸುಮಾರು 10 ಕಿ.ಮೀ. ಮುಂದಕ್ಕೆ ದಾಸೋಹ ವೆವಸ್ಥೆ ಮಾಡಿಕೊಳ್ಳಲಾಗಿದೆ. ತುಳಜಾಪುರ ಶ್ರೀ ಅಂಬಾಭವಾನಿ ದೇವಿಯ ದರ್ಶನಕ್ಕಾಗಿ ದೂರದ ಊರುಗಳಿಂದ ಪಾದಯಾತ್ರೆ ಕೈಗೊಳ್ಳುವ ಭಕ್ತಾದಿಗಳಿಗೆ ಮಾರ್ಗಮಧ್ಯದಲ್ಲಿ ಆಹಾರ ಮತ್ತು ವೈದ್ಯಕೀಯ ನೆರವು ಒದಗಿಸಲಾಗುವದು ಅದರ ಸದುಪಯೋಗ ಪಡೆದುಕೊಳ್ಳಿ ಎಂದು ತಿಳಸಿದರು. ಬಸವರಾಜ ಹೂಗಾರ, ಪ್ರಶಾಂತ ನಾಶಿ, ವಿಶ್ವನಾಥ ಕೋರಳ್ಳಿ, ಶರಣು ಅಚಲೇರಿ, ಬಸವರಾಜ ಗಾಳಿಮಠ, ನಾಗರಾಜ ಆಳೂರ, ಗುರುರಾಜ ಕೋಣಶಿರಸಗಿ, ಬಂಡು ಸ್ಥಾವರಮಠ, ಗೌತಮ ಯಂಟಮನ ಮುಂತಾದವರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

# ಆರೆಸ್ಸೆಸ್ ಪಥ ಸಂಚಲನದ ಅನುಮತಿಗೆ ಕಾಯಬೇಕು

## ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ | ಆರ್‌ಎಸ್‌ಎಸ್ ಕಾರ್ಯಕರ್ತರು ಪೊಲೀಸ್ ಠಾಣೆಗೆ ಮಾಹಿತಿ ನೀಡಿರುವ ಪತ್ರ ಪೋಸ್ಟ್ ಮಾಡಿದ ಸಚಿವರು





ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘ (RSS) ವಿಜಯ ದಶಮಿಯಂದು ನಡೆಸುವ ಪಥ-ಸಂಚಲನಕ್ಕೆ ನಿಗದಿತ ಅರ್ಜಿಯನ್ನು ಭರ್ತಿ ಮಾಡಿ, ಅಗತ್ಯ ವಿವರಗಳನ್ನು ಒದಗಿಸಿ ಮತ್ತು ಔಪಚಾರಿಕ ಅನುಮತಿಗಾಗಿ ಕಾಯಿರಿ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದ್ದಾರೆ.

ಬೆಂಗಳೂರಿನ ಪಥಸಂಚಲನ ಸಂಬಂಧ ಆರ್-ಎಸ್‌ಎಸ್ ಕಾರ್ಯಕರ್ತರು ಪೊಲೀಸ್ ಠಾಣೆಗೆ ಮಾಹಿತಿ ನೀಡಿರುವ ಪತ್ರ ಪೋಸ್ಟ್ ಮಾಡಿದ ಪ್ರಿಯಾಂಕ್ ಖರ್ಗೆ, ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ಅನುಮತಿಗಾಗಿ ಕಾಯಬೇಕು ಎಂದು ಹೇಳಿದ್ದಾರೆ.

ನನ್ನ ಆತ್ಮೀಯ RSS ಸ್ವಯಂಸೇವಕರೇ, ವಿಜಯ ದಶಮಿ ಹಬ್ಬದ ಸಂಭ್ರಮ ಜೋರಾಗಿ ನಡೆಯುತ್ತಿದೆ ಎಂದು ಭಾವಿಸುತ್ತೇನೆ. ನಿಮ್ಮ ಉತ್ಸಾಹಕ್ಕೆ ತಣ್ಣೀರು ಎರಚುವ ಉದ್ದೇಶವಿಲ್ಲ. ಆದರೆ ಒಂದು ಸಣ್ಣ ಜ್ಞಾಪನೆ, ಕೇವಲ 'ಮಾಹಿತಿ ನೀಡುವುದು' ಅಥವಾ 'ಸಹಕರಿಸಿ' ಅಥವಾ 'ಅಗತ್ಯ ವ್ಯವಸ್ಥೆ ಮಾಡಿ' ಎಂದು ಗೃಹ ಇಲಾಖೆಗೆ ತಿಳಿಸುವುದು ಅನುಮತಿ ಪಡೆದಂತೆ ಆಗುವುದಿಲ್ಲ. ದಯವಿಟ್ಟು ಎಲ್ಲಾ ಸಂಘಟನೆಗಳಿಗೆ ಅನ್ವಯಿಸುವ ನಿಗದಿತ ಕಾರ್ಯವಿಧಾನದ ಪ್ರಕಾರ ನಿಮ್ಮ ಅರ್ಜಿಯನ್ನು ಸಲ್ಲಿಸಿ ಮತ್ತು ಸಕ್ಷಮ ಪ್ರಾಧಿಕಾರಗಳಿಂದ ಔಪಚಾರಿಕ ಅನುಮೋದನೆಗಾಗಿ ಕಾಯಿರಿ ಎಂದು ಟ್ವೀಟ್ ಮಾಡಿದ್ದಾರೆ.

ಅಖಿಲ ಭಾರತೀಯ ಪ್ರತಿನಿಧಿ ಸಭಾ ವಾರ್ಷಿಕ ವರದಿ 2025-26ರಲ್ಲಿ RSS ಕರ್ನಾಟಕದಾದ್ಯಂತ 2,21,963 ಸಮವಸ್ತ್ರಧಾರಿ ಸ್ವಯಂಸೇವಕರನ್ನು ಒಳಗೊಂಡ 562 ಪಥಸಂಚಲನಗಳನ್ನು ನಡೆಸಿದೆ ಎಂದು ಹೇಳಿದೆ ಎಂದು ನೀವು ಓದಿದ್ದೀರಿ ಎಂದು ನನಗೆ ಖಾತರಿಯಿದೆ. ಈಗ ಲಕ್ಷಾಂತರ ಮಂದಿ ಒಂದೇ ದಿನ ಒಂದೇ ಸಮಯದಲ್ಲಿ ಕರ್ನಾಟಕದ ಬೀದಿಗಳಲ್ಲಿ ಮೆರವಣಿಗೆ ನಡೆಸಲು ಉದ್ದೇಶಿಸಿದಾಗ, ಪೊಲೀಸ್ ಇಲಾಖೆಯು ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಸಿಬ್ಬಂದಿ ನಿಯೋಜನೆ, ಸಾರಿಗೆ, ಊಟೋಪಚಾರ, ಸಂಚಾರ ನಿರ್ವಹಣೆ, ಭದ್ರತಾ ವ್ಯವಸ್ಥೆಗಳು ಮತ್ತು ಇತರ ಲಾಜಿಸ್ಟಿಕ್ಸ್. ಇವೆಲ್ಲಕ್ಕೂ ಯೋಜನೆ, ಜನಬಲ ಮತ್ತು ಸಾರ್ವಜನಿಕ ಸಂಪನ್ಮೂಲಗಳು ಬೇಕಾಗುತ್ತವೆ. ಆದ್ದರಿಂದ, ದಯವಿಟ್ಟು ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ಅಗತ್ಯ ವಿವರಗಳನ್ನು ಒದಗಿಸಿ ಮತ್ತು ಔಪಚಾರಿಕ ಅನುಮತಿಗಾಗಿ ಕಾಯಿರಿ ಎಂದು ಟ್ವೀಟ್ ಮಾಡಿದ್ದಾರೆ.

# ಭಾವೈಕ್ಯತೆಗೆ ಸಾಕ್ಷಿಯಾದ ದಸರಾ ಸಂಭ್ರಮ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಸಮೀಪದ ರೇವತಗಾಂವ ಗ್ರಾಮದಲ್ಲಿ ದಸರಾ ಹಬ್ಬವನ್ನು 9 ದಿನಗಳ ಕಾಲ ಸಡಗರದಿಂದ ಆಚರಿಸಲಾಯಿತು.

ದಸರಾದ ಕೊನೆಯ ದಿನವಾದ ಮಂಗಳವಾರದಂದು ಬೆಳಗ್ಗೆ ದೇವಿಗೆ ಪೂಜೆ ಮಂಗಳಾರತಿ, ನೈವೇದ್ಯ, ವಿಶೇಷ ಅಲಂಕಾರದೊಂದಿಗೆ ನೆರವೇರಿತು. ಅಲ್ಲದೇ ಬೆಳಗಿನ ಜಾವ ಗ್ರಾಮದ ರೇವಣಸಿದ್ಧೇಶ್ವರರ ಪೂಜಾರಿಯಾದ ಶಿವಾನಂದ ಪೂಜಾರಿಯವರು ನಸುಕಿನ ಜಾವ ಬನ್ನಿ ಮರಕ್ಕೆ ವಿಶೇಷವಾದ ಪೂಜೆಯನ್ನು ಸಲ್ಲಿಸಿ. ಬನ್ನಿಯನ್ನು ತಂದು ಶ್ರೀ ರೇವಣಸಿದ್ಧೇಶ್ವರ ದೇವಾಸ್ಥಾನದಲ್ಲಿ ಇಡಲಾಯಿತು.

ಸಂಜೆ 5 ಗಂಟೆಗೆ ದೇವಾಸ್ಥಾನದಿಂದ ಬನ್ನಿಯನ್ನು ಹಾಗೂ ಪಲ್ಲಕ್ಕಿಯನ್ನು ವಾಲಿಕಾರರ ರಕ್ಷಣೆಯಲ್ಲಿ ಗ್ರಾಮದ ಪಾದಗಟ್ಟಿ ಹತ್ತಿರ ತಗೆದುಕೊಂಡು ಹೋಗಲಾಯಿತು. ಅಪಾರ ಸಂಖ್ಯೆಯಲ್ಲಿ ಗ್ರಾಮಸ್ಥರೇಲ್ಲರೂ ಹೊಸ ಉಡುಪುಗಳನ್ನು ತೊಟ್ಟು ಬನ್ನಿ ಮುರಿಯಲು ಸೇರಿದ್ದರು. ನಂತರ ಬನ್ನಿಗೆ ಪೂಜೆಯನ್ನು ಸಲ್ಲಿಸಿದ ನಂತರ ಗ್ರಾಮಸ್ಥರೇಲ್ಲರು ಪೂಜೆ ಬನ್ನಿಯನ್ನು ಪಡೆಯಲು ಮುಗಿಬಿದ್ದಿದ್ದರು.

ಹೀಗೆ ಪಡೆದ ಬನ್ನಿಯನ್ನು ಗ್ರಾಮಸ್ಥರು ಗ್ರಾಮದ ದೇವರುಗಳಿಗೆ ಬನ್ನಿಯನ್ನು ಮುಡಿಸಿ ದರ್ಶನ ಪಡೆದರು. ಮನೆಯ ಮುಂದೆ ಆರತಿಯನ್ನು ಬೆಳಗಿಸಿಕೊಂಡು. ಮನೆಯಲ್ಲಿನ ಜಗಲಿ ಮೇಲಿನ ದೇವರಿಗೆ ಬನ್ನಿ ಅರ್ಪಿಸಿದರು.



# ಅ.25 ರಂದು ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ

## ಕರ್ನಾಟಕ ಮಾಧ್ಯಮ ಒಕ್ಕೂಟದಿಂದ ದಿ. ಡಾ.ನಾಗರಾಜ ಜಮಖಂಡಿ ಸ್ಮರಣಾರ್ಥ ಮುದ್ದೇಬಿಹಾಳದಲ್ಲಿ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ಕರ್ನಾಟಕ ಮಾಧ್ಯಮ ಒಕ್ಕೂಟ(ರಿ), ಬೆಂಗಳೂರು ಇದರ ವಿಜಯಪುರ ಜಿಲ್ಲಾ ಮುದ್ದೇಬಿಹಾಳ ಹಾಗೂ ತಾಳಿಕೋಟೆ ತಾಲೂಕು ಘಟಕಗಳ ಸಂಂ-ಮುಕ್ತಾಶ್ರಯದಲ್ಲಿ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ ಹಿರಿಯ ಪತ್ರಕರ್ತ ದಿ. ಡಾ. ನಾಗರಾಜ ಬಿ. ಜಮಖಂಡಿ ಅವರ ಸ್ಮರಣಾರ್ಥ ಮಾಧ್ಯಮ ರತ್ನ, ಮಾಧ್ಯಮ ಸಾಧಕ ರತ್ನ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನ ಸಮಾರಂಭವನ್ನು ಮುದ್ದೇಬಿಹಾಳದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ರಾಜ್ಯಾಧ್ಯಕ್ಷ ನಾರಾಯಣ ಮಾಯಾಚಾರಿ ತಿಳಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಮುದ್ದೇಬಿಹಾಳ ಪಟ್ಟಣದ ಶ್ರೀ ವಿಜಯ ಮಹಾಂತೇಶ ಮಂಗಳ ಕಾರ್ಯಾಲಯದ ದಾಸೋಹ ಭವನದಲ್ಲಿ ಅ.25ರಂದು ಬೆಳಗ್ಗೆ 11 ಗಂಟೆಗೆ ಕಾರ್ಯಕ್ರಮ ನಡೆಯಲಿದೆ ಎಂದು ಅವರು ಹೇಳಿದರು.

ಒಕ್ಕೂಟದ ತಾಳಿಕೋಟೆ ತಾಲೂಕಾಧ್ಯಕ್ಷ ಅಂಭಾಜಿ ಘೋರ್ಪಡೆ ಹಾಗೂ ಮುದ್ದೇಬಿಹಾಳ ತಾಲೂಧ್ಯಕ್ಷ ಪರಶುರಾಮ ಕೊಣ್ಣೂರ ಮಾತನಾಡಿ, ಜಮಖಂಡಿ ಪರಿವಾರ ಸಮಾಜ ಸೇವಾ ಪ್ರತಿಷ್ಠಾನ(ರಿ), ಮುದ್ದೇಬಿಹಾಳ ಹಾಗೂ ಡಾ. ನಾಗರಾಜ ಜಮಖಂಡಿ ಮೆಮೋರಿಯಲ್ ಟ್ರಸ್ಟ್ (ರಿ), ಬೆಂಗಳೂರು ಇವರ ಸಹಯೋಗದಲ್ಲಿ ಕೊಡಮಾಡುವ ಜೀವಮಾನ ಮಾಧ್ಯಮ ಸಾಧಕ ರತ್ನ ಪ್ರಶಸ್ತಿಗೆ ಬೆಳಗಾವಿಯ ಕರ್ನಾಟಕ ಪತ್ರಕರ್ತರ ಸಂಘದ ಅಧ್ಯಕ್ಷರು ಹಾಗೂ ಗಡಿ ಕನ್ನಡಿಗ ದಿನಪತ್ರಿಕೆಯ ಸಂಪಾದಕರಾದ ಮುರುಗೇಶ ಬಾಬುರಾವ ಶಿವಪೂಜಿ ಅವರನ್ನು ಆಯ್ಕೆ ಮಾಡಲಾಗಿದೆ. ಹಾಗೂ ಮಾಧ್ಯಮ ರತ್ನ ಪ್ರಶಸ್ತಿಗೆ ಸುವರ್ಣ ನ್ಯೂಸ್ ಮುಖ್ಯ ನಿರೂಪಕಿ ಶ್ವೇತಾ ಆಚಾರ್ಯ ಅವರನ್ನು ಆಯ್ಕೆ ಮಾಡಲಾಗಿದೆ ಮತ್ತು ಮಾಧ್ಯಮ ಸಾಧಕ ರತ್ನ ಪ್ರಶಸ್ತಿಗೆ ಉದಯವಾಣಿ ಅಸಿಸ್ಟೆಂಟ್ ನ್ಯೂಸ್ ಎಡಿಟರ್ ಮಲ್ಲಿಕಾರ್ಜುನ ತಿಪ್ಪಾರ ಹಾಗೂ ವಿಜಯವಾಣಿ ಜಿಲ್ಲಾ ವಿಶೇಷ ವರದಿಗಾರ ಪರಶುರಾಮ ಬಾಸಗಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.










ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಕುಂಟೋಜಿ ಗ್ರಾಮದ ಭಾವೈಕ್ಯತಾ ಸಂಸ್ಥಾನ ಮಠದ ಗುರು ಚನ್ನವೀರ ಶಿವಾಚಾರ್ಯರರು ವಹಿಸಲಿದ್ದು, ತಾಳಿಕೋಟೆಯ ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರು ಸಾನ್ನಿಧ್ಯ ವಹಿಸಲಿದ್ದಾರೆ. ಕರ್ನಾಟಕ ರಾಜ್ಯ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಹಾಗೂ ಶಾಸಕ ಸಿ.ಎಸ್.ನಾಡಗೌಡ(ಅಪ್ಪಾಜಿ) ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕರ್ನಾಟಕ ಮಾಧ್ಯಮ ಒಕ್ಕೂಟದ ರಾಜ್ಯಾಧ್ಯಕ್ಷ ಹಾಗೂ ಕನ್ನಡಪ್ರಭ ತಾಲೂಕು ವರದಿಗಾರ ನಾರಾಯಣ ಮಾಯಾಚಾರಿ ಅಧ್ಯಕ್ಷತೆ ವಹಿಸಲಿದ್ದಾರೆ.

ಮಾಜಿ ಜಿ.ಪಂ. ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ, ಬಿಜೆಪಿ ಮಾಜಿ ಜಿಲ್ಲಾ ಅಧ್ಯಕ್ಷ ಆರ್.ಎಸ್. ಪಾಟೀಲ ಕೂಚಬಾಳ, ಹನುಮಂತಗೌಡ ಪಾಟೀಲ, ಶಿವಶಂಕರಗೌಡ ಹಿರೇಗೌಡರ, ಮಲ್ಲಿಕಾರ್ಜುನ ಮದರಿ, ಸಿ.ಬಿ. ಅಸ್ಕಿ, ಗುರಣ್ಣ ತಾರನಾಳ, ಹಿರಿಯ ಪತ್ರಕರ್ತರಾದ ಜಿ.ಟಿ. ಘೋರ್ಪಡೆ, ಪ್ರಭುರಾಜ ಕಲಬುರ್ಗಿ, ರಾಯನಗೌಡ ತಾತರೆಡ್ಡಿ, ವೈ.ಎಚ್. ವಿಜಯಕರ, ಕಾಮರಾಜ ಬಿರಾದಾರ, ಸಿಕಂದರ್ ಜಾನ್ವೇಕರ ಹಾಗೂ ಬಸವರಾಜ ನಾಲತವಾಡ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ವಿಜಯಪುರ ಜಿಲ್ಲಾಧಿಕಾರಿ ಡಾ.ಆನಂದ ಕೆ., ಜಿಲ್ಲಾ ಪಂಚಾಯತ್ ಸಿಇಒ ಆನಂದ ಪ್ರಕಾಶ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ, ಲೋಕಾಯುಕ್ತ ಡಿವೈಎಸ್ಪಿ ಮಲ್ಲಿಕಾರ್ಜುನ ತುಳಸಿಗೇರಿ, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಅಮರೇಶ ದೊಡಮನಿ, ಡಿಎಚ್‌ಒ ಡಾ.ಮಲ್ಲನಗೌಡ ಬಿರಾದಾರ, ಹುಬ್ಬಳ್ಳಿ-ಧಾರವಾಡ ಪಾಲಿಕೆ ವಲಯ ಉಪ ಆಯುಕ್ತ ಅರವಿಂದ ಜಮಖಂಡಿ, ಕನ್ನಡಪ್ರಭ ಸ್ಥಾನಿಕ ಸಂಪಾದಕ ಬ್ರಹ್ಮಾನಂದ ಹಡಗಲಿ, ಹಸಿರು ಕ್ರಾಂತಿ ಸಂಪಾದಕ ಸಂಪತ್ತಕುಮಾರ ಮುಚಳಂಬಿ, ವಕೀಲರ ಸಂಘದ ಅಧ್ಯಕ್ಷ ಶಶಿಕಾಂತ ಮಾಲಗತ್ತಿ ಆಗಮಿಸಲಿದ್ದಾರೆ ಎಂದು ಒಕ್ಕೂಟದ ಸರ್ವ ಸದಸ್ಯರು ತಿಳಿಸಿದ್ದಾರೆ.

### ಪತ್ರಕರ್ತರಿಗೆ ಪ್ರಶಸ್ತಿ ಗೌರವ

ಸಂಯುಕ್ತ ಕರ್ನಾಟಕದ ವಿಜಯಪುರ ಜಿಲ್ಲಾ ವರದಿಗಾರ ಶರಣು ಮರನೂರ, ಕನ್ನಡಪ್ರಭದ ನಾಲತವಾಡ ಗ್ರಾಮೀಣ ವರದಿಗಾರ ಯುನುಸ್ ಮೂಲಿಮನಿ, ಚಕ್ರವರ್ತಿ ನ್ಯೂಸ್ ಸಂಪಾದಕ ಹಾಗೂ ನ್ಯಾಯವಾದಿ ಚೇತನ ಶಿವಶಿಂಪಿ, ಉತ್ತರ ಟುಡೆ ನ್ಯೂಸ್ ಡಿಜಿಟಲ್ ಮೀಡಿಯಾ ಸುದ್ದಿ ಸಂಪಾದಕ ಚೇತನ ಕೆಂದೂಳಿ, ಉದಯಕಾಲ ದಿನಪತ್ರಿಕೆಯ ಜಿಲ್ಲಾ ವರದಿಗಾರ ಮಕಬೂಲ್ ಬನ್ನೆಟ್ಟಿ, ಭೀಮ ಸಂಸ್ಕೃತಿ ಸಂಪಾದಕ ಯಲ್ಲಾಲಿಂಗ ಪೂಜಾರಿ(ಮೌರ್ಯ) ಅವರಿಗೆ ಮಾಧ್ಯಮ ರತ್ನ ಪ್ರಶಸ್ತಿ ಪ್ರದಾನವಾಗಲಿದೆ.

**ಪತ್ರಿಕಾ ವಿತರಕರಿಗೂ ಪ್ರಶಸ್ತಿ**

ಪತ್ರಿಕೋದ್ಯಮದ ಜೊತೆಗೆ ಪತ್ರಿಕಾ ವಿತರಣಾ ಕ್ಷೇತ್ರದಲ್ಲಿಯೂ ಸೇವೆ ಸಲ್ಲಿಸುತ್ತಿರುವ ಯುವಕರನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ರವಿ ಕುಂಬಾರ ಹಾಗೂ ಚಂದ್ರಶೇಖರ ಮುಕೀಹಾಳ ಅವರಿಗೆ ಅತ್ಯುತ್ತಮ ಪತ್ರಿಕಾ ವಿತರಕ ಪ್ರಶಸ್ತಿ ನೀಡಿ ಸನ್ಮಾನಿಸಲಾಗುತ್ತದೆ.

**ವಿವಿಧ ಕ್ಷೇತ್ರಗಳ ಸಾಧಕರಿಗೆ ವಿಶೇಷ ಗೌರವ**

ಕಾರ್ಯಕ್ರಮದಲ್ಲಿ ಗುಪ್ತಚರ ಪೊಲೀಸ್ ಇಲಾಖೆಯ ಬೆಳಗಾವಿ ಡಿವೈಎಸ್ಪಿ ರಾಘವೇಂದ್ರ ಹವಾಲ್ದಾರ, ವಾಣಿಜ್ಯೋದ್ಯಮ ಸಂಸ್ಥೆಯ ನಿರ್ದೇಶಕ ಶರಣು ಸಜ್ಜನ, ಮುದ್ದೇಬಿಹಾಳ ಸರ್ಕಾರಿ ಆಸ್ಪತ್ರೆಯ ತಾಲೂಕು ವೈದ್ಯಾಧಿಕಾರಿ ಡಾ.ರಂಗನಾಥ ವೈದ್ಯ, ಪ್ರಗತಿಪರ ರೈತ ಹಿತಚಿಂತಕ ಅರವಿಂದ ಕೊಪ್ಪ, ಕರ್ನಾಟಕ ಕೋ-ಆಪ್ ಬ್ಯಾಂಕ್ ಉಪಾಧ್ಯಕ್ಷ ಶ್ರೀಕಾಂತ ಚಲವಾದಿ, ಮುದ್ದೇಬಿಹಾಳದ ಯುವ ವರದಿಗಾರ್ತಿ ಸ್ನೇಹಾ ಹಣಮಂತ ನಲವಡೆ ಹಾಗೂ ಕ್ರೀಡಾ ಸಾಧಕರಾದ ಕುಮಾರ ವಿಕ್ರಾಂತ ಮತ್ತು ಕುಮಾರಿ ಶಕುಂತಲಾ ಶಿವಕುಮಾರ ಶಾರದಳ್ಳಿ ಅವರನ್ನು ವಿಶೇಷವಾಗಿ ಸನ್ಮಾನಿಸಲಾಗುತ್ತದೆ.

# ದುಷ್ಟ ಶಿಕ್ಷಣ ಶಿಷ್ಟ ರಕ್ಷಣೆ ಪ್ರತಿಪಾದಿಸುವ ನವರಾತ್ರಿ ನವಶಕ್ತಿ ವೈಭವ




ವೀಣಾ ಹೇಮಂತಗೌಡ ಪಾಟೀಲ್.
ಮುಂಡರಗಿ - ಗದಗ

■ ದಯರಶ್ಮಿ ದಿನಪತ್ರಿಕೆ

ಭಾರತದ ಹಿಂದೂ ಸಂಪ್ರದಾಯದಲ್ಲಿ ನವರಾತ್ರಿ ಇಲ್ಲವೇ ದಸರಾ ಹಬ್ಬವು ಅತ್ಯಂತ ಸಡಗರ ಮತ್ತು ಸಂಭ್ರಮದಿಂದ ಆಚ-ರಿಸುವ ಹಬ್ಬವಾಗಿದೆ. ಲೌಕಿಕವಾಗಿ ದುಷ್ಟ ಶಿಕ್ಷಣ ಶಿಷ್ಟ ರಕ್ಷಣೆಯನ್ನು ಪ್ರತಿಪಾದಿಸುವ ಈ ಹಬ್ಬದಲ್ಲಿ ದುಷ್ಟತನಕ್ಕೆ ಕೊನೆಯಿದೆ ಹಾಗೂ ಒಳ್ಳೆಯದು ಯಾವಾಗಲೂ ಗೆಲ್ಲುತ್ತದೆ ಎಂಬ ಸಂದೇಶವನ್ನು ನಾವು ನೋಡುತ್ತೇವೆ.

ನವರಾತ್ರಿಯ ಸಮಯದಲ್ಲಿ ದೇವಿಯ ಒಂಬತ್ತು ವಿವಿಧ ರೂಪಗಳನ್ನು ನಾವು ಪೂಜಿಸುತ್ತೇವೆ.

ನವರಾತ್ರಿ ಇಲ್ಲವೆ ದಸರಾ ಎಂದು ಕರೆಯಲ್ಪಡುವ ಈ ಹಬ್ಬದಲ್ಲಿ ನಾವು ಶಕ್ತಿ ದೇವತೆ ದೇವಿಯನ್ನು ಒಂಬತ್ತು ಬೇರೆ ಬೇರೆ ವಿಧದ ರೂಪಗಳಲ್ಲಿ ಪೂಜಿಸುತ್ತೇವೆ. ಹರಿಹರ ಬ್ರಹ್ಮಾದಿಗಳನ್ನು ಸೃಷ್ಟಿಸಿದ ದೇವಿಯು ಅವರಿಗೆ ಈ ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯಗಳನ್ನು ನಿರ್ವಹಿಸಲು ಆದೇಶಿಸಿದಳು.

ಹರಿಹರ ಬ್ರಹ್ಮಾದಿಗಳು ದೇವಿಯ ಆದೇಶದಂತೆ ತಮ್ಮ ಕಾರ್ಯವನ್ನು ನೆರವೇರಿಸುತ್ತಿದ್ದರೂ ಆಗಾಗ ಬಂದೊದಗುವ ವಿಘ್ನಗಳನ್ನು, ರಾಕ್ಷಸರನ್ನು ನಿವಾರಿಸಲು ಶ್ರೀದೇವಿಯಿಂದಲೇ ಸಾಧ್ಯವಾಗಿದ್ದು ಆಕೆ ಮಾತೃ ಸ್ವರೂಪಳು.

ಸ್ತ್ರೀ ಕುಲದ ಪಾರಮ್ಯವನ್ನು ಸೂಚಿಸುವ ಈ ನವರಾತ್ರಿಯ ಹಬ್ಬದಲ್ಲಿ ಶಕ್ತಿ ಸ್ವರೂಪಿಣಿ ದೇವಿಯನ್ನು ವಿವಿಧ ರೂಪಗಳಲ್ಲಿ ಪೂಜಿಸುತ್ತಾರೆ.

ಶೈಲ ಪುತ್ರಿ... ನವರಾತ್ರಿಯ ಪ್ರಥಮ ದಿವಸ ಶೈಲ ಪುತ್ರಿಯನ್ನು ಪೂಜಿಸುವರು. ಶೈಲ ಪುತ್ರಿಯು ಹೆಸರೇ ಹೇಳುವಂತೆ ಹಿಮವಂತನ ಮಗಳಾಗಿದ್ದು ತಾಯಿ ದುರ್ಗೆಯ ಮೊದಲ ಪುನರ್ಜನ್ಮವಾಗಿದ್ದಾಳೆ. ಹಳದಿ ವರ್ಣದ ಬಟ್ಟೆಯನ್ನು ಧರಿಸಿದ್ದು ಶುದ್ಧತೆ ಮತ್ತು ಪ್ರಕೃತಿಯ ಪ್ರತೀಕವಾಗಿರುವ ಆಕೆ, ಶೂಲವನ್ನು ಕೈಯಲ್ಲಿ ಹಿಡಿದು ವೃಷಭಾರೂಢಳಾಗಿದ್ದಾಳೆ . ಹಳದಿ ಬಣ್ಣವು ಚೈತನ್ಯ ಮತ್ತು ಶಾಂತಿ ಸಮಾಧಾನಗಳ ಸಂಕೇತವಾಗಿದ್ದು ಬ್ರಾಹ್ಮಿ ಮುಹೂರ್ತದಲ್ಲಿ ಶುಬ್ರಸ್ನಾತರಾಗಿ ಹಳದಿ ಬಟ್ಟೆಗಳನ್ನು ಧರಿಸಿ ದೇವಿಯನ್ನು ಪೂಜಿಸಿ ಆಕೆಯ ಕೃಪೆಗೆ ಪಾತ್ರರಾಗಬೇಕು.

ಚಂಚಲ ಚಿತ್ತವನ್ನು ಹೊಂದಿದವರು ಮೂಲಾಧಾರ ಚಕ್ರದಲ್ಲಿ ತೊಂದರೆಯನ್ನು ಅನುಭವಿಸುತ್ತಾರೆ. ಆದ್ದರಿಂದ ಯೋಗ ಸಾಧಕರು ಚಂಚಲಚಿತ್ತರಿಗೆ ಶೈಲ ದೇವಿಯನ್ನು ಪೂಜಿಸಲು ಹೇಳುವರು.ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸಬಯಸುವವರು ಶೈಲಪುತ್ರಿಯನ್ನು ಪೂಜಿಸಿ ಆರಾಧಿಸಬೇಕು. ಮೂಲಾಧಾರ ಚಕ್ರದ ಮೇಲೆ ಗಮನವಿಟ್ಟು ಧ್ಯಾನವನ್ನು ಮಾಡುವ ಮೂಲಕ ಆಧ್ಯಾತ್ಮ ಸಾಧನೆಯ ಮೊದಲ ಮೆಟ್ಟಿಲನ್ನು ಏರಬಹುದು.

ಬ್ರಹ್ಮಚಾರಿಣಿ ದೇವಿ.... ದೇವಾದಿ ದೇವ ಮಹಾದೇವ ಪರಶಿವನನ್ನು ಪತಿಯಾಗಿ ಪಡೆಯಲು ತಪಸ್ಸನ್ನು ಆಚರಿಸಿದ ಬ್ರಹ್ಮಚಾರಿಣಿ ದೇವಿಯು ದುರ್ಗೆಯ ಎರಡನೇ ಅವತಾರವಾಗಿ ನವರಾತ್ರಿಯ ಎರಡನೇ ದಿನ ಪೂಜಿಸಲ್ಪಡುತ್ತಾಳೆ. ಬ್ರಹ್ಮಚಾರಿಣಿ ದೇವಿಯು ಶ್ವೇತ ವಸ್ತ್ರಧಾರಿಣಿಯಾಗಿದ್ದು ಶುದ್ಧತೆ ಮತ್ತು ಶಾಂತಿಯನ್ನು ಪ್ರತಿಪಾದಿಸುತ್ತಾಳೆ. ಈಕೆಯು ತನ್ನ ಎಡಗೈಯಲ್ಲಿ ಕಮಂಡಲನ್ನು ಹಿಡಿದಿದ್ದು ಬಲಗೈಯಲ್ಲಿ ಜಪಮಾಲೆಯನ್ನು ಹಿಡಿದಿದ್ದಾಳೆ. ಶಿವ ಯೋಗದ ಸಮಯದಲ್ಲಿ ಶಿವ ಮತ್ತು ಶಕ್ತಿ ರೂಪಿಣಿಯಾದ ಬ್ರಹ್ಮಚಾ-ರಿಣಿ ದೇವಿಯನ್ನು ಪೂಜಿಸುವುದರಿಂದ ಎಲ್ಲ ಇಷ್ಟಾರ್ಥಗಳು ಸಿದ್ಧಿಯಾಗುತ್ತವೆ, ಸುಖ ಸಮೃದ್ಧಿ ಸಮಾಧಾನಗಳು ಹೆಚ್ಚುತ್ತವೆ.

ಸಿದ್ದಿ ಸಾಧನೆಗೆ ಮೂರ್ತ ರೂಪವೇ ಬ್ರಹ್ಮಚಾರಿಣಿ ದೇವಿ. ತನ್ನ ಹಿಂದಿನ ಜನ್ಮದಲ್ಲಿ ಸತಿ ದೇವಿಯಾಗಿ ಹುಟ್ಟಿದ ಆಕೆ ತನಗೆ ಮತ್ತು ತನ್ನ ಪತಿಗಾದ ಅವಮಾನದಿಂದ ತಂದೆಯು ಮಾಡುತ್ತಿದ್ದ



ಯಜ್ಞದ ಕುಂಡಕ್ಕೆ ಹಾರಿ ಪ್ರಾಣಬಿಟ್ಟಳು... ಆಕೆಯೇ ಮರುಜನ್ಮದಲ್ಲಿ ಹಿಮವಂತನ ಮಗಳಾಗಿ ಮರುಜನ್ಮವೆತ್ತಿದಳು. ವಿಧಿ ಲಿಖಿತದಂತೆ ಶಿವನನ್ನು ವಿವಾಹವಾಗಲು ಸತತ ಶ್ರದ್ಧೆ ಮತ್ತು ಸಾಧನೆಯಿಂದ ಒಡಗೂಡಿದ ಆಕೆಯ ಭಕ್ತ ಭಾವದ ವ್ಯಕ್ತ ರೂಪಕ್ಕೆ ಸಾಕ್ಷಾತ್ ಪರಶಿವನೇ ಸೋತು ಆಕೆಯನ್ನು ಮದುವೆಯಾದನು.

ಶ್ವೇತವರ್ಣದ ಬಟ್ಟೆಗಳನ್ನು ಧರಿಸಿದ ದೇವಿಯನ್ನು ಪೂಜಿಸಬೇಕು.

ಸ್ವಾದಿಷ್ಟಾನ ಚಕ್ರದ ಮೇಲೆ ಹಿಡಿತವನ್ನು ಸಾಧಿಸಲು ಮೊಸರನ್ನವನ್ನು ಬಹುವಾಗಿ ಇಷ್ಟಪಡುವ ಬ್ರಹ್ಮಚಾರಿಣಿ ದೇವಿಯನ್ನು ಪೂಜಿಸಬೇಕು. ಬ್ರಹ್ಮಚರ್ಯ ಶಕ್ತಿಯನ್ನು ಕಾಪಾಡುವ, ಸೃಷ್ಟಿಯ ಅಧಿದೇವತೆ ಪಾರ್ವತಿ ದೇವಿಯ ಅವತಾರವಾಗಿರುವವಳೇ ಬ್ರಹ್ಮಚಾ-ರಿಣಿ. ಕೇವಲ ಒಂದು ಎಲೆಯನ್ನು ಸೇವಿಸಿ ನೂರಾರು ವರ್ಷ ತಪಸ್ಸನ್ನು ಆಚರಿಸಿದ ಆಕೆ ಅಪರ್ಣೆ ಎನಿಸಿದಳು. ಕಂದ ಮೂಲಗಳನ್ನು ಸೇವಿಸಿ ಕೂಡ ಆಕೆ ಕಠಿಣ ತಪಸ್ಸನ್ನು ಆಚರಿಸಿ ಶಿವನನ್ನು ಪತಿಯಾಗಿ ಪಡೆದು ಉಮಾ ಎನಿಸಿಕೊಂಡಳು

ಚಂದ್ರ ಘಂಟ ದೇವಿ.....ಶಿವಪುರಾಣದ ಪ್ರಕಾರ ಸ್ಮಶಾನವಾಸಿ ಶಿವನು ಚಂದ್ರಶೇಖರನ ರೂಪದಲ್ಲಿ ಹಿಮವಂತ ಮತ್ತು ಮೇನಾ ದೇವಿಯರ ಮಗಳಾದ ಪಾರ್ವತಿಯನ್ನು ವರಿಸಲು ಬರುತ್ತಾನೆ. ಈ ಚಂದ್ರಶೇಖರನ ಶಕ್ತಿ ಸ್ವರೂಪಿಣಿಯೇ ಚಂದ್ರ ಘಂಟ ದೇವಿ.

ನವರಾತ್ರಿಯ ಮೂರನೇ ದಿನ ದೇವಿಯನ್ನು ಚಂದ್ರಘಂಟಾ ರೂಪದಲ್ಲಿ ಪೂಜಿಸುತ್ತಾರೆ. ಮನುಷ್ಯನ ವ್ಯಕ್ತಿತ್ವದಲ್ಲಿ ಸಮತೋಲನ ಮತ್ತು ಸ್ಥಿರತೆಯನ್ನು ಕಾಯ್ದುಕೊಳ್ಳುವ ಶಕ್ತಿಯನ್ನು ಪ್ರತಿಪಾದಿಸುವ ಚಂದ್ರ ಘಂಟಾ ದೇವಿಯು ಋಣಾತ್ಮಕ ವಿಚಾರಗಳನ್ನು ನಮ್ಮ ಜೀವನದಿಂದ ಹೊರಗೋಡಿಸಿ ಮಾನಸಿಕ ಶಾಂತಿಯನ್ನು ಕಾಯಲು ಕಾರಣಳಾಗುತ್ತಾಳೆ. ಚಂದ್ರಘಂಟಾ ದೇವಿಯನ್ನು ಪೂಜಿಸುವುದ-ರಿಂದ ಭಯದಿಂದ ಮುಕ್ತರಾಗಬಹುದು ಮತ್ತು ಆಕೆ ಪಾಪ ವಿನಾಶಿನಿ ಎಂಬುದು ಭಕ್ತರ ನಂಬಿಕೆಯಾಗಿದೆ.

ಗಂಟೆಯಾಕಾರದ ಚಂದ್ರನನ್ನು ಮಸ್ತಕದಲ್ಲಿ ಧರಿಸಿರುವ, ಚಿನ್ನದ



ಮೈಬಣ್ಣವನ್ನು ಹೊಂದಿರುವ ಚಂದ್ರ ಘಂಟಾ ದೇವಿಯು ಧೈರ್ಯ ಹಾಗೂ ಶೌರ್ಯದ ಸಂಕೇತವಾದ ಸಿಂಹದ ಮೇಲೆ ಕುಳಿತಿರುತ್ತಾಳೆ.

ಚಂದ್ರಘಂಟಾ ದೇವಿಯು ಹತ್ತು ಕೈಗಳನ್ನು ಹೊಂದಿದ್ದು, ಪ್ರತಿ ಕೈಯಲ್ಲಿಯೂ ತ್ರಿಶೂಲ ಗದೆ ಕಮಲ ಬಿಲ್ಲು ಬಾಣ ಕಮಂಡಲ ಖಡ್ಗ ಜಪಮಾಲೆ ಮತ್ತು ಗಂಟೆಯನ್ನು ಹಿಡಿದುಕೊಂಡಿದ್ದಾಳೆ. ಕೆಂಪು ಬಣ್ಣದ ಬಟ್ಟೆಯನ್ನು ಧರಿಸಿರುವ ಆಕೆಯ ಒಂದು ಕೈಯು ಅಭಯಮುದ್ರೆಯನ್ನು ಹೊಂದಿದ್ದು ಭಕ್ತರನ್ನು ಆಶೀರ್ವದಿಸುವ ಆಕೆ ದುಷ್ಟರನ್ನು ಶಿಕ್ಷಿಸಲು ಆಯುಧಗಳನ್ನು ಹಿಡಿದಿದ್ದರೂ ಶಿಷ್ಟರನ್ನು ರಕ್ಷಿಸುವ ದಯೆ, ಸಹಾನುಭೂತಿ ಮತ್ತು ತನ್ನ ಮಕ್ಕಳ ಮೇಲೆ ಕಾಳ-ಜಿಗಳು ವ್ಯಕ್ತವಾಗುವ ಮುಖಭಾವವನ್ನು ಹೊಂದಿದ್ದಾಳೆ. ಬೂದು ಬಣ್ಣವನ್ನು ಇಷ್ಟಪಡುವ ಚಂದ್ರಗಂಟ ದೇವಿಯನ್ನು ಕೌಮಾರಿ ಎಂದು ಕೂಡ ಕರೆಯುತ್ತಾರೆ.

ಪಾರ್ವತಿ ದೇವಿಯು ಕಠಿಣ ತಪಸ್ಸನ್ನು ಮಾಡಿ ಶಿವನನ್ನು ಮದುವೆಯಾಗಲು ಸಿದ್ಧಳಾಗುತ್ತಾಳೆ.ಶಿವನ ಭಯಂಕರ ರೂಪವನ್ನು ನೋಡಿ ಪಾರ್ವತಿಯ ತಾಯಿ ಮೇನಾ ದೇವಿಯ ಮೂರ್ಛೆ ಹೋಗುತ್ತಾಳೆ. ಆಗ ಪಾರ್ವತಿಯು ಶಿವನಿಗೆ ಸೌಮ್ಯ ಸ್ವರೂಪವನ್ನು ಧರಿಸುವಂತೆ ಕೇಳಿಕೊಂಡು ತಾನು ಚಂದ್ರಘಂಟಾ ದೇವಿಯ ರೂಪದಲ್ಲಿ ವಧುವಾಗಿ ಶಿವನೊಂದಿಗೆ ವಿವಾಹವಾಗುತ್ತಾಳೆ. ವಧುವಿನ ರೂಪದಲ್ಲಿ ಕಂಗೊಳಿಸುವ ಚಂದ್ರಘಂಟಾ ದೇವಿಯನ್ನು ಪೂಜಿಸಿ ಜೀವನದಲ್ಲಿ ಯಶಸ್ಸು ಮತ್ತು ಮನಃಶಾಂತಿಯನ್ನು ಪಡೆಯಬೇಕು.

ಕೂಷ್ಮಾಂಡಾದೇವಿ....ನವರಾತ್ರಿಯ ನಾಲ್ಕನೇ ದಿನ ತಾಯಿ ಪಾರ್ವತಿಯನ್ನುಕೂಷ್ಮಾಂಡಾ ದೇವಿಯ ಅವತಾರದಲ್ಲಿ ಪೂಜಿಸುತ್ತಾರೆ. ಅನಾಹತ ಚಕ್ರ ಇಲ್ಲವೇ ಹೃದಯ ಚಕ್ರವನ್ನು ಹೊಂದಿರುವ ದೇವಿಯು ಎಂಟು ಕೈಗಳನ್ನು ಹೊಂದಿದ್ದು ಅಷ್ಟ ಭುಜದೇವಿ, ವೈಷ್ಣವಿ ಎಂದು ಕೂಡ ಕರೆಯಲ್ಪಡುತಾಳೆ.

**ಆಕೆಯ ಹೆಸರಿನ 'ಕೂ' ಎಂಬ ಅಕ್ಷರವು 'ಸ್ವಲ್ಪ' ಎಂದು**

'ಉಶ್ಮಾ' ಎಂಬ ಅಕ್ಷರವು ಅಕ್ಷರವು ಬೆಚ್ಚಗಿನ ಇಲ್ಲವೇ ಚೈತನ್ಯ ಶಕ್ತಿ ಎಂದು ಹೇಳಬಹುದು.ಅಂಡ ಎಂದರೆ ಶಕ್ತಿಯುತವಾದ ತತ್ತಿ ಇಲ್ಲವೇ ಬೀಜ ಎಂದು ಹೇಳಬಹುದು. ಸಿದ್ದಿ ಮತ್ತು ಬುದ್ಧಿಯರು ಆಕೆಯ ಜಪಮಾಲೆಯಲ್ಲಿ ಸ್ಥಿತರಾಗಿದ್ದಾರೆ ಎಂದು ಹೇಳುವರು.

ಕೂಷ್ಮಾಂಡಾ ದೇವಿಯು ಬ್ರಹ್ಮಾಂಡವನ್ನು ಸೃಷ್ಟಿಸಿದ್ದು ಆಕೆಯು ಬಿಳಿಯ ವರ್ಣದ ಕುಂಬಳಕಾಯಿಯನ್ನು ಇಷ್ಟಪಡುವ ಕಾರಣ ಆಕೆಯ ಹೆಸರಿನ ಜೊತೆಗೆ ಬ್ರಹ್ಮಾಂಡವು ಸೇರಿ ಕೂಷ್ಮಾಂಡ ಎಂದಾಗಿದೆ. ಶಂಖ, ಚಕ್ರ, ಖಡ್ಗ, ಬಿಲ್ಲು ಬಾಣಗಳನ್ನು ಧರಿಸಿರುವ ಆಕೆಯ ಎರಡು ಕೈಗಳಲ್ಲಿ ಎರಡು ಕಳಶಗಳಿದ್ದು ಒಂದರಲ್ಲಿ ಅಮೃತ ಮತ್ತು ಇನ್ನೊಂದರಲ್ಲಿ ರಕ್ತವು ತುಂಬಿದೆ.

**ಸಿಂಹ ವಾಹಿನಿಯಾಗಿರುವ ಕೂಷ್ಮಾಂಡ ದೇವಿಯು**

ಗಾಢಾಂಧಕಾರದಲ್ಲಿ ಬೆಳಕನ್ನು ಹೊತ್ತು ಈ ಜಗತ್ತನ್ನು ಬೆಳಗಲು ಬಂದವಳು. ಸದಾ ನಗೆಯನ್ನು ಚೆಲ್ಲುವ ಕೂಷ್ಮಾಂಡಾದೇವಿ ಬೆಳಕು ಮತ್ತು ಚೈತನ್ಯ ಶಕ್ತಿಯ ಅಧಿದೇವತೆಯಾಗಿದ್ದಾಳೆ. ತನ್ನ ಭಕ್ತರಿಗೆ ಆರೋಗ್ಯ, ಶಕ್ತಿ ಮತ್ತು ಧೈರ್ಯವನ್ನು ಕೊಡುವ ಕೂಷ್ಮಾಂಡಾದೇವಿ ಕೇಸರಿ ವರ್ಣವನ್ನು ಪ್ರತಿನಿಧಿಸುತ್ತಾಳೆ.

ಜಗತ್ತನ್ನುಸೃಷ್ಟಿಸಿರುವ ಸತ್,ಚಿತ್,ಆನಂದ ಮೂರ್ತಿಯಾಗಿರುವ ಕೂಷ್ಮಾಂಡಾ ದೇವಿಯನ್ನು ಪೂಜಿಸಿ ಭಕ್ತರು ಉತ್ತಮ ಆರೋಗ್ಯ, ಶಕ್ತಿ ಮತ್ತು ಧೈರ್ಯವನ್ನು ಪಡೆಯುತ್ತಾರೆ. ವೈಷ್ಣವಿ ರೂಪಿಣಿಯಾಗಿ ಸ್ತ್ರೀ ಶಕ್ತಿಯ ಪಾರಮ್ಯವನ್ನು ಕೂಷ್ಮಾಂಡ ದೇವಿಯು ಸಾರುವಳು .

ಸ್ಕಂದ ಮಾತಾ ದೇವಿ..... ನವರಾತ್ರಿಯ ಐದನೇ ದಿನ ಪಾರ್ವತಿ ದೇವಿಯನ್ನು ಸ್ಕಂದ ಮಾತಾ ದೇವಿಯ ರೂಪದಲ್ಲಿ ಪೂಜಿಸುತ್ತಾರೆ. ದೇವತೆಗಳ ಅಪೇಕ್ಷೆಯ ಮೇರೆಗೆ ಪಾರ್ವತಿಯ ಅಚಲ ಪ್ರೇಮಕ್ಕೊಲಿದ ಶಿವನು ಆಕೆಯನ್ನು ವರಿಸಿದನು. ಅಸುರ ಸಂಹಾರಕ್ಕಾಗಿ ದೇವಸೇನಾನಿಯಾದ ಷಣ್ಮುಖನ ಜನನಕ್ಕಾಗಿ ಮತ್ತೆ ದೇವತೆಗಳು ಶಿವನನ್ನು ಪ್ರಾರ್ಥಿಸಿದರು. ಶಿವ ಮತ್ತು ಪಾರ್ವತಿಯರ ಯೋಗ ಅಗ್ನಿ ತೇಜಸನ್ನು ಧರಿಸಲು ಎಲ್ಲರೂ ಹೆದರಿದಾಗ ಗಂಗೆಯು ಅದನ್ನು ತನ್ನಲ್ಲಿಟ್ಟು ಬೆಳೆಸಿದಳು. ನವಜಾತ ಶಿಶುವಿಗೆ ಕೃತ್ತಿಕೆಯರು ಹಾಲೂಡಿಸಿ ಬೆಳೆಸಿದರೆ ಪಾರ್ವತಿ ದೇವಿಯು ಕುಮಾರನನ್ನು ಮುದ್ದಿಸಿ ಬೆಳೆಸಿದಳು. ಮುಂದೆ ಆತನೇ ಬೆಳೆದು ತಾರಕಾಸುರನನ್ನು ಸಂಹ-ರಿಸಿದನು. ಹೀಗೆ ತಾರಕಾಸುರನನ್ನು ಸಂಹರಿಸಿದ ಸ್ಕಂದ ಎಂದರೆ ಷಣ್ಮುಖನ ತಾಯಿ ಪಾರ್ವತಿ ದೇವಿಯನ್ನು ಸ್ಕಂದ ಮಾತೆಯ ಹೆಸ-ರಿನಲ್ಲಿ ಎಲ್ಲರೂ ಈ ದಿನ ಪೂಜಿಸುವರು.

ನಾಲ್ಕುಕೈಗಳನ್ನು,ಮೂರು ಕಣ್ಣುಗಳನ್ನುಹೊಂದಿರುವ ತಾಯ್ತನದ ಪ್ರತೀಕವಾಗಿರುವ ಸ್ಕಂದ ಮಾತ ದೇವಿಯು ಸಿಂಹಾರೂಢಳಾಗಿದ್ದಾಳೆ. ಎರಡು ಕರಗಳಲ್ಲಿ ಕಮಲದ ಹೂಗಳನ್ನು ಹಿಡಿದಿರುವ ಸ್ಕಂದಮಾತಾ ದೇವಿಯ ಒಂದು ಕೈ ಅಭಯಮುದ್ರೆಯಲ್ಲಿದ್ದು ಭಕ್ತ-ರಿಗೆ ಧೈರ್ಯವನ್ನು ನೀಡುವಂತಿದ್ದರೆ ಮತ್ತೊಂದು ಕೈಯಲ್ಲಿ ಪುಟ್ಟ ಹಸುಗೂಸು ಕಾರ್ತಿಕೇಯನನ್ನು ಹಿಡಿದಿರುವ ಸ್ಕಂದ ಮಾತಾದೇವಿ ಮಾತೃತ್ವದ ಪ್ರತೀಕವೆನಿಸಿದ್ದಾಳೆ. ಕೆಲವೆಡೆ ಕಮಲದ ಹೂವಿನ ಮೇಲೆ ಪದ್ಮಾಸನದಲ್ಲಿ ಆಕೆ ಕುಳಿತಿರುವುದನ್ನು ಕಾಣಬಹುದು. ತುಸು ಶ್ಯಾಮಲ ವರ್ಣದವಳಾಗಿರುವ ಸ್ಕಂದಮಾತ ದೇವಿಯು ನೀಲವರ್ಣದ ಉಡುಗೆಯನ್ನು ಧರಿಸಿರುತ್ತಾಳೆ.ಭಕ್ತರಿಗೆ ಧೈರ್ಯ, ಸಿರಿ, ಸಂಪತ್ತುಗಳನ್ನು ನೀಡುವ ಅಧಿದೇವತೆಯಾಗಿದ್ದಾಳೆ. ಬೇಡಿದ ಭಕ್ತರಿಗೆ ಜ್ಞಾನ ಸಾಗರವನ್ನು ಉಣಬಡಿಸುವಷ್ಟು ಜಾಣ್ಮೆಯನ್ನು ಆಕೆ ಹೊಂದಿದ್ದು ಆಕೆಯನ್ನು ಅಗ್ನಿ ದೇವತೆ ಎಂದು ಕೂಡ ಕರೆಯುತ್ತಾರೆ. ಮೋಕ್ಷಪ್ರದಾಯಿನಿ ಕೂಡ ಆಕೆಯೇ.

ಸ್ಕಂದ ಮಾತಾ ದೇವಿಯನ್ನು ಪೂಜಿಸುವ ಭಕ್ತರು ಪ್ರಾಪಂಚಿಕ ಮೋಹವನ್ನು, ಪಂಚೇಂದ್ರಿಯಗಳ ಭೋಗವನ್ನು ತೊರೆಯಬೇಕು. ಭಕ್ತಿ ಮತ್ತು ನಂಬಿಕೆಯಿಂದ ಆಕೆಯನ್ನು ಪೂಜಿಸಿದ ಭಕ್ತರಿಗೆ ಆಕೆ ಅಭಯಪ್ರದಳಾಗಿದ್ದಾಳೆ.

ಸ್ಕಂದ ಮಾತ ದೇವಿಯು ಪುತ್ರ ಷಣ್ಮುಖನನ್ನು ಕುಮಾರ ಸ್ವಾಮಿ, ಮುರುಗನ್ ಎಂಬ ಹೆಸರಿನಿಂದ ಕರೆಯುತ್ತಾರೆ. ಪಂಚಮಹಾಭೂತಗಳನ್ನು ತನ್ನ ವಶದಲ್ಲಿ ಇರಿಸಿಕೊಂಡಿರುವ ಷಣ್ಮುಖ ಓರ್ವ ನಿಜವಾದ ಯೋಗಿ ಎನಿಸಿರುವನು. ಆರೋಗ್ಯ ಮತ್ತು ಶಕ್ತಿಯ ಸಂಚಯವಾದ ಷಣ್ಮುಖನನ್ನು ಆತನ ತಾಯಿ ಪಾರ್ವತಿ ದೇವಿಯೊಂದಿಗೆ ಪೂಜಿಸುವುದಕ್ಕೆ ನವರಾತ್ರಿಯ ಐದನೇ ದಿನ ಅತ್ಯಂತ ಪ್ರಶಸ್ತವಾಗಿದೆ.

ಕಾತ್ಯಾಯಿನಿ ದೇವಿ....ನವರಾತ್ರಿ ಹಬ್ಬದ ಆರನೇ ದಿನ ದೇವಿ ಪಾರ್ವತಿಯನ್ನು ಕಾತ್ಯಾಯಿನಿ ದೇವಿಯ ರೂಪದಲ್ಲಿ ಆರಾಧಿಸುತ್ತಾರೆ. ದೇವಿ ಕಾತ್ಯಾಯಿನಿಯು ಜಾಣ್ಮೆ ಮತ್ತು ಸಾಮರಸ್ಯಗಳ ಅಧಿದೇವತೆಯಾಗಿದ್ದಾಳೆ. ಪಾಪನಾಶಿನಿಯಾಗಿರುವ ಈಕೆ ಭಕ್ತ-ರಿಗೆ ಅಭಯ ಪ್ರದಳಾಗಿದ್ದಾಳೆ. ಅವಿವಾಹಿತ ತರುಣಿಯರು ತಾವು ಇಚ್ಛಿಸುವ ಗುಣಗಳುಳ್ಳ ವರನನ್ನು ಪಡೆಯಲು ಕಾತ್ಯಾಯನಿ ದೇವಿಯನ್ನು ಪೂಜಿಸುತ್ತಾರೆ.

ಭೂಲೋಕದ ಜನರನ್ನು ಕಾಡುತ್ತಿದ್ದ ಮಹಿಶಾಸುರ ಎಂಬ ರಾಕ್ಷಸನ ಉಪಟಳ ತಡೆಯದೆ ದೇವತೆಗಳೆಲ್ಲರೂ ತ್ರಿಮೂರ್ತಿಗಳಿಗೆ ಮೊರೆಯಿಟ್ಟಾಗ ಬ್ರಹ್ಮ, ವಿಷ್ಣು, ಮಹೇಶ್ವರರು ತಮ್ಮೆಲ್ಲಾ ಶಕ್ತಿಯನ್ನು ಧಾರೆಯೆರೆದು ಕಾತ್ಯಾಯಿನಿಯನ್ನು ಸೃಷ್ಟಿಸಿದರು.

ತಮ್ಮ ವಿಶೇಷ ಉಡುಗೆಗಳನ್ನು,ಆಭರಣಗಳನ್ನು,ಆಯುಧಗಳನ್ನು ಆಕೆಗೆ ಉಡುಗೊರೆಯಾಗಿ ನೀಡಿದರು. ತ್ರಿಮೂರ್ತಿಗಳು ಮತ್ತು ಅಷ್ಟದಿಕ್ಪಾಲಕರ ಎಲ್ಲ ವಿಶೇಷ ಶಕ್ತಿಯನ್ನು ಪಡೆದುಕೊಂಡ ಆಕೆಯನ್ನು ಮಹಿಷಾಸುರನನ್ನು ಯುದ್ಧ ಮಾಡಿ ಸಂಹರಿಸಲು ಕೇಳಿಕೊಂಡರು. ದೇವಿಯು ಕಾತ್ಯಾಯಿನಿಯ ರೂಪದಲ್ಲಿ ಮಹಿಷಾಸುರನೊಂದಿಗೆ ಯುದ್ಧ ಮಾಡಿ ಆತನನ್ನು ಸಂಹರಿಸಿದಳು.

ಈ ದಿನ ವಿಶೇಷವಾಗಿ ಮಹಿಳೆಯರು ಶ್ವೇತ ವಸ್ತ್ರವನ್ನು ಧರಿಸಿ ದೇವಿಯನ್ನು ಪೂಜಿಸಿ ಧೈರ್ಯ ಮತ್ತು ಸಂರಕ್ಷಣೆಗಾಗಿ ದೇವಿಯನ್ನು ಬೇಡಿಕೊಳ್ಳುತ್ತಾರೆ. ದೇವಿಗೆ ಶುದ್ಧವಾದ ಜೇನುತುಪ್ಪವನ್ನು ನೈವೇದ್ಯವಾಗಿ ಅರ್ಪಿಸಿ ಸಂಪತ್ತು ಮತ್ತು ಆರ್ಥಿಕ ಅಭಿವೃದ್ಧಿಯನ್ನು ಕೊಡು ಎಂದು ಬೇಡಿಕೊಳ್ಳುತ್ತಾರೆ.

ಉಗ್ರ ಸ್ವರೂಪಿಣಿಯಾಗಿ ಅವತಾರವೆತ್ತಿರುವ ಕಾತ್ಯಾಯಿನಿ ದೇವಿಗೆ ಒಂದೆಡೆ ನಾಲ್ಕು ಕೈಗಳಿದ್ದರೆ ಮತ್ತೊಂದೆಡೆ 10, 18 ಕೈಗಳನ್ನು ಹೊಂದಿರುವ ವಿವಿಧ ರೂಪಗಳಲ್ಲಿ ಸಿಂಹವಾಹಿನಿಯಾಗಿ ಆಕೆ ಪೂಜಿಸಲ್ಪಡುತ್ತಾಳೆ. ಕಾತ್ಯಾಯಿನಿ ದೇವಿಯು ಮಹಿಷಾಸುರನನ್ನು ಸಂಹರಿಸಿ ಮಹಿಷಾಸುರ ಮರ್ದಿನಿ ಎಂದು ಕರೆಯಲ್ಪಟ್ಟಳು.

ಚಂದ್ರನಂತೆ ಉಜ್ವಲವಾದ ಬೆಳಕನ್ನು ಚೆಲ್ಲುವ, ಸಿಂಹವಾಹಿನಿಯಾಗಿರುವ ಕಾತ್ಯಾಯಿನಿ ದೇವಿಯು ದಾನವರ ಪಾಲಿಗೆ ದುಷ್ಟಹಂತ್ರಿಯಾಗಿ ದುಷ್ಟರನ್ನು ಶಿಕ್ಷಿಸಿ ತನ್ನ ಭಕ್ತರಾದ ಶಿಷ್ಟರನ್ನು ಪರಿಪಾಲಿಸುವಳು

ಕಾಂಚನ ಮಾಲೆ ಮತ್ತು ಪದ್ಮ ಪುಷ್ಪವನ್ನು ತನ್ನ ಮುಕುಟದಲ್ಲಿ ಧರಿಸಿರುವ ಶಿವನ ಪತ್ನಿಯಾದ ಕಾತ್ಯಾಯಿನಿ ದೇವಿಯು ಪೀತಾಂಬರ ಮತ್ತು ನಾನಾಲಂಕಾರಗಳಿಂದ ಭೂಷಿತವಾಗಿದ್ದಾಳೆ. ಪರಮಾನಂದವನ್ನು ನೀಡುವ ಪರಬ್ರಹ್ಮ ಸ್ವರೂಪಿಣಿಯಾಗಿದ್ದಾಳೆ. ತನ್ನ ಭಕ್ತರ ಪರಮ ಶಕ್ತಿಯಾಗಿರುವ ವಿಶ್ವಕರ್ತಳು ವಿಶ್ವಾತೀತಳು, ವಿಶ್ವ ಪ್ರೇಮಿ ವಿಶ್ವ ಕ್ಷೇಮವನ್ನು ಬಯಸುವ ತಾಯಿ ಕಾತ್ಯಾಯಿನಿದೇವಿಯಾಗಿದ್ದಾಳೆ.

ಕಾತ್ಯಾಯಿನಿ ದೇವಿಯು ಆಜ್ಞಾಚಕ್ರದ ಅಧಿದೇವತೆ. ಮಾನಸಿಕ ಅಸಮತೋಲನವನ್ನು ಸರಿಪಡಿಸಲು ಜ್ಞಾನ, ಸ್ಪಷ್ಟತೆಗಳನ್ನು ಹೊಂದಲು ಆಜ್ಞಾಚಕ್ರದ ಅದಿದೇವತೆಯಾದ ಕಾತ್ಯಾಯಿನಿಯನ್ನು ಪೂಜಿಸಬೇಕು.

ಕಾಳರಾತ್ರಿ ದೇವಿ....ನವರಾತ್ರಿ ಹಬ್ಬದ ಏಳನೆಯ ದಿನ ಪಾರ್ವತಿ ದೇವಿಯನ್ನು ತಾಯಿ ಕಾಳರಾತ್ರಿಯ ರೂಪದಲ್ಲಿ ಪೂಜಿಸಲಾಗುತ್ತದೆ. ಕಗ್ಗತ್ತಲ ರಾತ್ರಿಯ ಶಕ್ತಿಯನ್ನು ಪ್ರತಿನಿಧಿಸುವ ಕಾಳರಾತ್ರಿ ದೇವಿಯು ಉಗ್ರ ರಾಕ್ಷಸರಾದ ಚಂಡ ಮುಂಡರನ್ನು ಸಂಹರಿಸಿದ ದಿನ.

ಮೂರು ಲೋಕದ ಪ್ರಜೆಗಳಿಗೆ ಉಪಟಳ ನೀಡುತ್ತಿದ್ದ ಪ್ರಳಯಾಂತಕ ರಾಕ್ಷಸರಾದ ಶುಂಭ ಮತ್ತು ನಿಶುಂಭದ್ವಯರು ಹಿಮಾಚಲದಲ್ಲಿ ತಪಗೈಯುತ್ತಿದ್ದ ಸೌಂದರ್ಯದ ಖನಿಯಾಗಿದ್ದ ವನದೇವಿಯ ಕುರಿತು ದೂತರಿಂದ ಅರಿತರು. ವಿವಾಹವಾಗಬೇಕೆಂಬ ಆಸೆಯಿಂದ ಆಕೆಯನ್ನು ಕರೆತರಲು ಚಂಡ ಮುಂಡರನ್ನು ಕಳುಹಿಸಿದನು. ಆಗ ಮಹಾದೇವಿಯು ಚಂಡ ಮುಂಡರನ್ನು ಯುದ್ಧದಲ್ಲಿ ಸಂಹರಿಸಿ ಆಕೆ ಚಾಮುಂಡಿ ಎನಿಸಿದಳು. ಕಾಳರಾತ್ರಿಯು ಪಾರ್ವತಿ ದೇವಿಯ ಅತ್ಯಂತ ಉಗ್ರ ಸ್ವರೂಪವಾಗಿದ್ದು ಆಕೆ ಕತ್ತಲನ್ನು ಕೊನೆಗಾಣಿಸುವ ದೇವತೆ ಎಂದು ಪರಿಗಣಿಸಲ್ಪಟ್ಟಿದ್ದಾಳೆ.

ತನ್ನ ಚಿನ್ನದ ಬಣ್ಣವನ್ನು ತೊರೆದು ಕಪ್ಪು ಬಣ್ಣವನ್ನು ಹೊಂದುವ ಪಾರ್ವತಿ ದೇವಿಯು ಕಾಳರಾತ್ರಿಯಾಗಿ ಕತ್ತೆಯ ಮೇಲೆ ಸವಾರಿ ಮಾಡುತ್ತಾ ದುಷ್ಟ ರಾಕ್ಷಸರಾದ ಶು0ಭ ಮತ್ತು ನಿಶುಂಭರನ್ನು, ರಕ್ತ ಬೀಜಾಸುರ ಮತ್ತು ಚಂಡ ಮುಂಡರನ್ನು ಸಂಹರಿಸಿ ಎಲ್ಲ ರಾಕ್ಷಸರು ಮತ್ತು ಋಣಾತ್ಮಕ ಶಕ್ತಿಗಳನ್ನು ನಾಶ ಮಾಡಿದಳು.

ಒರಿಸ್ಸಾದ ಕಪಾಲಶಾಸ್ತ್ರದ ಪುಸ್ತಕ 'ಶಿಲ್ಪ ಪ್ರಕಾಶ' ಎಂಬ ಕೃತಿಯಲ್ಲಿ ಕಾಳರಾತ್ರಿ ದೇವಿಯ ಕುರಿತು ಹೆಚ್ಚಿನ ವಿವರಗಳಿದ್ದು ಈಕೆ ಸಹಸ್ರಾರ ಚಕ್ರದ ಅಧಿದೇವತೆಯಾಗಿದ್ದು, ತನ್ನ ಭಕ್ತರನ್ನು ದುಷ್ಟ-ರಿಂದ ರಕ್ಷಿಸಲು ಅವರನ್ನು ಸಂಹರಿಸುವ ಮೂಲಕ ತನ್ನ ಭಕ್ತರಿಗೆ ಅಭಯಪ್ರದಾಯಿನಿಯಾಗಿದ್ದಾಳೆ.

ಕಾಲ ಎಂಬ ಪದದಲ್ಲಿ ಎರಡು ಅರ್ಥಗಳಿದ್ದು, ಒಂದು ಸಮಯವನ್ನು ಮತ್ತೊಂದು ಕಡು ಕತ್ತಲೆಯನ್ನು ಸೂಚಿಸುತ್ತದೆ. ಕಾಳರಾತ್ರಿ ದೇವಿಯು ಕಡುಗಪ್ಪು ಬಣ್ಣವನ್ನು ಧರಿಸಿದ್ದು ಉಗ್ರವಾದ ಕೆಂಗಣ್ಣು ಮತ್ತು ರಕ್ತವರ್ಣದ ನಾಲಿಗೆಯನ್ನು ಹೊಂದಿದ್ದು 4 ಕೈಗಳನ್ನು ಹೊಂದಿದ್ದಾಳೆ. ಒಂದು ಕೈಯಲ್ಲಿ ಖಡ್ಗವನ್ನು ಮತ್ತೊಂದು ಕೈಯಲ್ಲಿ ಪರಶುವನ್ನು ಹಿಡಿದಿರುವ ಆಕೆ ತನ್ನ ಇನ್ನೊಂದು ಕೈಯಲ್ಲಿ ರಕ್ತವನ್ನು ತುಂಬಿದ ತಲೆಬುರುಡೆಯನ್ನು ಹಿಡಿದಿದ್ದಾಳೆ. ಆಕೆಯ ಇನ್ನೊಂದು ಕೈ ಅಭಯಮುದ್ರೆಯನ್ನು ಹೊಂದಿದ್ದಾಳೆ.ಕೇಶವನ್ನು ಹರಿ ಬಿಟ್ಟಿರುವ ಚತುರ್ಭುಜಗಳನ್ನು ಹೊಂದಿರುವ ಕಾಲ ರಾತ್ರಿ ದೇವಿಯು ದಿವ್ಯವಾದ ಬೆಳಕಿನ ಪ್ರಭೆಯನ್ನು ಹೊಂದಿದ್ದಾಳೆ.

ದುರ್ಗಾದೇವಿ.... ನವರಾತ್ರಿ ಹಬ್ಬದ ಎಂಟನೇ ದಿನ ದುರ್ಗಾಷ್ಟಮಿ. ನವರಾತ್ರಿ ಹಬ್ಬದ ಎಂಟನೇ ದಿನವನ್ನು ದುರ್ಗಾದೇವಿಯ ಹೆಸರಿನಲ್ಲಿ ಆರಾಧಿಸುತ್ತಾರೆ. ಚಂಡ ಮುಂಡರನ್ನು ವಧಿಸಿದ ತಾಯಿ ಚಾಮುಂಡಿಂ-ಮು ರಕ್ತ ಬೀಜಾಸುರನನ್ನು ಕೂಡ ಸಂಹರಿಸಿದಳು. ಪಾರ್ವತಿ ದೇವಿಯ ಎಂಟನೆಯ ಅವತಾರವೇ ದುರ್ಗಾದೇವಿಯಾಗಿದ್ದಾಳೆ.

ದುರ್ಗಾದೇವಿಯು ಶಾಂತಿ ಮತ್ತು ಸಾಮರ್ಥ್ಯಗಳ ಅಧಿದೇವತೆಯಾಗಿದ್ದು ಆಕೆಯ ಸೌಂದರ್ಯ ತೊಳೆದ ಮುತ್ತಿನಂತಹ ಕಾಂತಿಯಿಂದ ಹೊಳೆಯುತ್ತದೆ.

ವೃಷಭವಾಹನಳಾಗಿರುವ ತಾಯಿ ದುರ್ಗಾದೇವಿಯು ಪ್ರಶಾಂತವಾದ ಮುಖ ಮುದ್ರೆಯನ್ನು ಹೊಂದಿದ್ದು

ನಾಲ್ಕು ಕೈಗಳನ್ನು ಹೊಂದಿದ್ದು ಎಡಗಡೆಯ ಮೇಲಿನ ಕೈಯಲ್ಲಿ ತ್ರಿಶೂಲವನ್ನು ಬಲಗಡೆಯ ಕೆಳಗಿನ ಕೈಯಲ್ಲಿ ಡಮರುವನ್ನು ಹಿಡಿದಿದ್ದು ಇನ್ನೆರಡು ಕೈಗಳು ಅಭಯಮುದ್ರೆಯನ್ನು ಹೊಂದಿದ್ದು ಭಕ್ತರಿಗೆ ಧೈರ್ಯವನ್ನು ಮತ್ತು ವರವನ್ನು ಕೊಡುವ ವರದಾಯಿನಿಯಾಗಿದ್ದಾಳೆ.

ತನ್ನ ಭಕ್ತರ ಮನದ ಕ್ಲೇಶವನ್ನು ಕಳೆಯುವ ಆಕೆ ಅತ್ಯಂತ ಸುಂದರವಾಗಿದ್ದು ಮಹಾ ಗೌರಿ ಎಂದು ಕರೆಯಲ್ಪಡುತ್ತಾಳೆ. ಶುದ್ಧತೆ,ಗೌರವರ್ಣ ಮತ್ತು ಅನುಗ್ರಹದ ಅಧಿದೇವತೆ ಗೌರಿ. ಹಾಲಿನಂತಹ ಗೌರವ ವರ್ಣವನ್ನು ಹೊಂದಿರುವ ಕಾರಣವೇ ಆಕೆಯನ್ನು ಮಹಾಗೌರಿ ಎಂದು ಕರೆಯುವುದು.

ಸ್ತ್ರೀತ್ವದ ಪಾರಮ್ಯವನ್ನು ತೋರುವ ಈ ದುರ್ಗಾಷ್ಟಮಿಯ ದಿನ ಕರುಣೆ, ಶಾಂತಿ, ಸಹಾನುಭೂತಿ ಮತ್ತು ತಾಯಿತನದ ಅನುಭೂತಿಗಳನ್ನು ಹೊಂದಿರುವ ಮಹಾಗೌರಿಯನ್ನು ಪೂಜಿಸಿ ಆಕೆಯ ಅನುಗ್ರಹಕ್ಕೆ ಪಾತ್ರರಾಗಬೇಕು. ಗುಲಾಬಿ ವರ್ಣವನ್ನು ಪ್ರತಿನಿಧಿಸುವ ಪ್ರೀತಿ, ಸಹಾನುಭೂತಿಗಳನ್ನು ಹೊಂದಿರುವ ಮಹಾ



ಗೌರಿಯು ಶಾಂತಿ ಮತ್ತು ಸಾಮರಸ್ಯದ ಸಂಕೇತವಾಗಿದ್ದಾಳೆ. ಶ್ವೇತ ವರ್ಣದ ಮಲ್ಲಿಗೆ ಹೂಗಳನ್ನು ಮಹಾ ಗೌರಿಗೆ ಅರ್ಪಿಸಬೇಕು. ಎಲ್ಲ ರೂಪಗಳನ್ನು ಒಳಗೊಂಡಿರುವ ಸರ್ವಶಕ್ತಿ ಮಯಿಯಾಗಿರುವ ಭಕ್ತ-ರಿಗೆ ಮಹಾಗೌರಿ ಅಭಯಪ್ರದಳಾಗಿರುವಳು.

ಸಿದ್ದಿಧಾತ್ರಿ ದೇವಿ... ನವರಾತ್ರಿಯ 9ನೇ ದಿನವನ್ನು ಸಿದ್ದಿಧಾತ್ರಿ ದೇವಿಯ ದಿನವನ್ನಾಗಿ ಆಚರಿಸುತ್ತಾರೆ. ಅತ್ಯುನ್ನತ ಆಧ್ಯಾತ್ಮಿಕ ಔನ್ನತ್ಯದ ಈ ರಾತ್ರಿಯಂದು ಸಿದ್ದಿಧಾತ್ರಿಯನ್ನು ಪೂಜಿಸುವ ಮೂಲಕ ಭಕ್ತರು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾರೆ. ಸಿದ್ದಿ ಎಂದರೆ ಸಾಧನೆ



ಅಥವಾ ಕಾರ್ಯನಿರ್ವಹಣೆ ಎಂದು ಹೇಳಿದರೆ ಧಾತ್ರಿ ಎಂದರೆ ಮನೋಭೀಷ್ಟಗಳನ್ನು ಪೂರೈಸುವವಳು ಎಂದರ್ಥ. ನಮ್ಮೆಲ್ಲಾ ಆದ-ನ್ಯಾತ್ಮಿಕ ಮತ್ತು ಭೌತಿಕ ಪ್ರಪಂಚದ ಮನೋಕಾಮನೆಗಳನ್ನು ದೇವಿಯು ಪೂರೈಸುತ್ತಾಳೆ. ಜೀವನದಲ್ಲಿನ ಎಲ್ಲ ನೋವು,ಸಂಕಟಗಳನ್ನು ದೇವಿಯನ್ನು ಜನರು ಪ್ರಾರ್ಥಿಸುವರು.

ಗಾಡ ಅಂಧಕಾರದಿಂದ ಕೂಡಿದ ಈ ಬ್ರಹ್ಮಾಂಡವನ್ನು ಸೃಷ್ಟಿಸಿದ ದೇವಿಯು ತ್ರಿಮೂರ್ತಿಗಳನ್ನು ಕೂಡ ಸೃಷ್ಟಿಸಿದಳು. ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರಿಗೆ ಸೃಷ್ಟಿ, ಸ್ಥಿತಿ ಮತ್ತು ಲಯ ಕಾರ್ಯಗಳನ್ನು ನಿರ್ವಹಿಸಲು ಹೇಳಿದ ದೇವಿಯು ಗಾಢಾಂಧಕಾರದಿಂದ ಕೂಡಿದ ಈ ಸೃಷ್ಟಿಯನ್ನು ತನ್ನ ದಿವ್ಯ ಪ್ರಭೆಯಿಂದ ಕೂಷ್ಮಾಂಡ ದೇವಿಯು ಬೆಳಗಿಸಿದಳು.

ಲಯಕರ್ತನಾದ ಶಿವನು ತನ್ನನ್ನು ಪರಿಪೂರ್ಣವಾಗಿ ಸಲು ಕೇಳಿಕೊಂಡಾಗ ಕೂಷ್ಮಾಂಡ ದೇವಿಯು ಆತನಿಗೆ ಒಟ್ಟು 18 ಸಿದ್ಧಿಗಳನ್ನು ದೇವಿಯ ರೂಪದಲ್ಲಿ ಅನುಗ್ರಹಿಸಿದಳು. ಆಕೆಯೇ ಸಿದ್ದಿಧಾತ್ರಿ ದೇವಿ.ಆತನಿಗೆ ಮೊದಲ 8 ಸಿದ್ದಿಗಳಾದ ಅಣಿಮಾ,ಮಹಿಮಾ,ಗ-ರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವಗಳು ಪರಿಪೂರ್ಣತೆಯನ್ನು ನೀಡಿದರೆ ಉಳಿದ ಹತ್ತು ಸಿದ್ದಿಗಳು ಸಂಪೂರ್ಣ ಪರಿಪೂರ್ಣನನ್ನಾಗಿಸಿದವು.

ಸೃಷ್ಟಿಕರ್ತ ಬ್ರಹ್ಮನು ಬ್ರಹ್ಮಾಂಡದಲ್ಲಿ ಸೃಷ್ಟಿ ಕಾರ್ಯವನ್ನು ನಡೆಸಲು ಸಿದ್ದಿರಾತ್ರಿಯ ಸಹಾಯವನ್ನು ಯಾಚಿಸಲು ಆಕೆ ಪರಶಿವನ ಅರ್ಧ ಶರೀರವನ್ನು ಸ್ತ್ರೀ ರೂಪಕ್ಕೆ ಬದಲಾಯಿಸಿದಳು. ಆದ್ದರಿಂದ ಶಿವನನ್ನು 'ಅರ್ಧ ನಾರೀಶ್ವರ' ಎಂದು ಕರೆಯುತ್ತಾರೆ.

ಸಿಂಹ ವಾಹಿನಿಯಾಗಿರುವ ಸಿದ್ದಿಧಾತ್ರಿಯು ಕಮಲ ಪುಷ್ಪದ ಮೇಲೆ ಕುಳಿತಿದ್ದು ನಾಲ್ಕು ಕೈಗಳನ್ನು ಹೊಂದಿದ್ದು ಶಂಖ, ಚಕ್ರ,ಹ-ರಿಗೆಗಳನ್ನು ಹೊಂದಿದ್ದು ಶ್ವೇತ ವಸ್ತ್ರಧಾರಿಣಿಯಾಗಿರುವ ಮಹಾಶಿವನಿಗೆ ಆನಂದವನ್ನು ತರುವ, ಪರಿಪೂರ್ಣತೆಯನ್ನು ಸಿದ್ದಿ ಧಾತ್ರಿ ದೇವಿಯು ಎಲ್ಲರಿಗೂ ನೀಡುವಳು.

# ಆದರ್ಶ ಗೃಹಸ್ಥಾಶ್ರಮವೇ ನಿಜವಾದ ಕೈಲಾಸ: ಚನ್ನಮಲ್ಲ ಸ್ವಾಮೀಜಿ

ಕಲಬುರಗಿ :ಸತಿ-ಪತಿಯರು ಪರಸ್ಪರರ ಮನಸ್ಸನ್ನು ಅರಿತು, ಅಹಂಕಾರವನ್ನು ಬಿಟ್ಟು ಅನ್ಯೋನ್ಯತೆಯಿಂದ ಬದುಕಿದಾಗ ಮಾತ್ರ ಆ ಮನೆಯು ಸಾಕ್ಷಾತ್ ಕೈಲಾಸವಾಗಲು ಸಾಧ್ಯ.ಎಂದು ನರೋಣಾ ಹಾಗೂ ಗೋಳಾದ ಹೊಸಮಠದ ಪೂಜ್ಯ ಚನ್ನಮಲ್ಲ ಸ್ವಾಮಿಗಳು ನುಡಿದರು.

ನಗರದ ಅಡ್ವೋಕೇಟ್ಸ್ ಕಾಲೊನಿಯ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದ್ದ ಗುಡ್ಡಾಪುರದ ದಾನಮ್ಮ ದೇವಿಯ ಜೀವನ ದರ್ಶನ ಕುರಿತ ಪುರಾಣ ಪ್ರವಚನ ಕಾರ್ಯಕ್ರಮದಲ್ಲಿ ಅವರು ಭಕ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಹಿಂದೂ ಧರ್ಮದಲ್ಲಿ ಉಲ್ಲೇಖಿಸಿರುವ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಎಂಬ ನಾಲ್ಕು ಆಶ್ರಮಗಳ ಮಹತ್ವವನ್ನು ಅವರು ಎಳೆ-ಎಳೆಯಾಗಿ ಬಿಚ್ಚಿಟ್ಟರು.ಒಂದು ಆದರ್ಶ ಮನೆ ಸದಾ ಆನಂದದ ನಿಲಯವಾಗಿರಬೇಕು.ಬುದ್ಧಿವಂತ ಹಾಗೂ ವಿಧೇಯ ಮಕ್ಕಳು, ಮೃದುಭಾಷಿಯಾದ ಪತ್ನಿ ಹಾಗೂ ಉತ್ತಮ ಸನ್ಮಿತ್ರರಿರಬೇಕು.ಮನೆಗೆ ಬರುವ ಅತಿಥಿಗಳನ್ನು ದೇವರಂತೆ ಸತ್ಕರಿಸುವ ಹಾಗೂ ಪ್ರತಿ ದಿನ ಶಿವಪೂಜೆ ಮಾಡುವ ಗುಣವಿದ್ದರೆ ಆ ಗೃಹಸ್ಥಾಶ್ರಮವೇ ಧನ್ಯ, ಎಂದು ಶಾಸ್ತ್ರಗಳ ವಾಕ್ಯವಾದ ಸಾನಂದಂ ಸದನಂ ಶ್ಲೋಕವನ್ನು ವಿವರಿಸಿದರು. ಸಂಸಾರವನ್ನು ತ್ಯಜಿಸಿ ಸನ್ಯಾಸಿಯಾಗುವುದಕ್ಕಿಂತ, ಸಂಸಾರದಲ್ಲಿದ್ದುಕೊಂಡೇ ವಿರಕ್ತಿ ಬೆಳೆಸಿಕೊಳ್ಳುವುದು ಅತ್ಯಂತ ಶ್ರೇಷ್ಠ ಎಂದು ಕಿವಿಮಾತು ಹೇಳಿದರು.

ಇಂದಿನ ವಿವಾಹ ವ್ಯವಸ್ಥೆಯ ಮಾನದಂಡಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ ಸ್ವಾಮೀಜಿಯವರು, ಮದುವೆಯ ನೈಜ ಅರ್ಥವನ್ನು ಮರೆತು ಕೇವಲ ಆಡಂಬರಕ್ಕೆ ಜೋತು ಬೀಳುತ್ತಿರುವ ಬಗ್ಗೆ ಎಚ್ಚರಿಸಿದರು.

ಮದುವೆಯಲ್ಲಿ ವಧುವಿಗೆ ನೀಡುವ ಕುಂಕುಮ, ಮಾಂಗಲ್ಯ, ಕಾಲುಂಗುರ ಮುಂತಾದ ಪ್ರತಿಯೊಂದು ವಸ್ತುಗಳಿಗೂ ಪವಿತ್ರ ಸಂಕೇತಗಳಿವೆ.ಕಾಲುಂಗುರವು ಅಹಂಕಾರ ಬಿಟ್ಟು ದೃಷ್ಟಿಯನ್ನು ಭೂಮಿಯತ್ತ ಇಡಲು ಸೂಚಿಸಿದರೆ, ಆರತಿ-ದೀಪಗಳು ತವರು ಮತ್ತು ಗಂಡನ ಮನೆಗಳೆರಡರ ಕೀರ್ತಿಯನ್ನು ಬೆಳಗುವುದರ ಸಂಕೇತವಾಗಿದೆ ಎಂದು ಮಾರ್ಮಿಕವಾಗಿ ನುಡಿದರು.

ದಾನಮ್ಮ ದೇವಿಯ ತ್ಯಾಗ ಮತ್ತು ಭಕ್ತಿಯನ್ನು ಸ್ಮರಿಸಿದ ಶ್ರೀಗಳು, ಲಿಂಗಮ್ಮನು ದಾಸೋಹದ ಮೂಲಕ 12ನೇ ಶತಮಾನದ ಶರಣ-ರಾದ ಬಸವಣ್ಣ, ಅಲ್ಲಮಪ್ರಭುಗಳೊಡನೆ ಬೆರೆತು ದಾನಮ್ಮಳಾಗಿ ಬೆಳಗಿದಳು. ಭಗವಂತನು ಆಡಂಬರಕ್ಕೆ ಒಲಿಯುವವನಲ್ಲ; ಆತ ಅಪ್ಪಟ ಭಕ್ತಿಗೆ ಮಾತ್ರ ಒಲಿಯುವವನು. ಕುಂಬಾರ ಗುಂಡಯ್ಯನ ಬಡ ಹೆಂಡತಿಯ ಭಕ್ತಿಯ ಗಂಜಿಯನ್ನು ಪರಶಿವನು



ಓಡೋಡಿ ಬಂದು ಸವಿದ ಕಥೆಯೇ ಇದಕ್ಕೆ ಜ್ವಲಂತ ಸಾಕ್ಷಿ ಎಂದು ವಿವರಿಸಿದರು. ಪುರಾಣದಲ್ಲಿ ದಾನಮ್ಮನ ಕಲ್ಯಾಣ ಮಹೋತ್ಸವದ ಸಂದರ್ಭ. ಕಾಲನಿಯ ಸದ್ಭಕ್ತರು ಸಭಾ ಮಂಟಪವನ್ನೇ ಕಲ್ಯಾಣ ಮಂಟಪವಾಗಿ ಸಿಂಗರಿಸಿದ್ದರು. 12 ನೇ ಶತಮಾನದಲ್ಲಿ ಉಮರಾಣಿ ಯಲ್ಲಿ ನಡೆದಿದ್ದ ದಾನಮ್ಮನ ಮದುವೆಯ ಕಲ್ಪನೆಯ ರೀತಿ ರಿವಾಜುಗಳಂತೆಯೇ ಎರಡೂ ಕಡೆಯ ಬೀಗರಾಗಿ ಕಲ್ಯಾಣ ಮಹೋತ್ಸವಲ್ಲಿ ಭಾಗವಹಿಸಿದರು. ದೇವಸ್ಥಾನದ ಪೂಜಾರಿ ಚೆನ್ನವೀರಯ್ಯ ಸ್ವಾಮಿಯವರು ವಿಧಿವಿಧಾನಗಳನ್ನು ನಡೆಸಿಕೊಟ್ಟರು.

# ಫ್ರಾನ್ಸ್ ಉರಿಯುತ್ತಿದೆ: ಇದು ಆಕ್ರೋಶವೋ, ಅರಾಜಕತೆಯೋ?




**ಆಕಾಶ ರೋಡಗಿ.**
ಶಿವೂರ – ಅಫಜಲಪುರ
ಕಲಬುರ್ಗಿ ಜಿಲ್ಲೆ

**ಶಾಲೆಗಳ ಶಿಥಿಲ ಗೋಡೆಗಳಿಂದ ರಾಜಕೀಯ ಅಧಿಕಾರದ ಅಲುಗಾಟದವರೆಗೆ; ಜನರ ಆಕ್ರೋಶ, ಹಿಂಸಾಚಾರ ಮತ್ತು ಧರ್ಮದ ಹೆಸರಿನಲ್ಲಿ ನಡೆಯುವ ಜಾಗತಿಕ ರಾಜಕಾರಣದ ಒಳಸುಳಿಗಳು! ವಿಶೇಷ ರಾಜಕೀಯ ಅಂಕಣ**

■ ಉದಯರಶ್ಮಿ ದಿನಪತ್ರಿಕೆ

ಒಂದು ದೇಶದ ಬೀದಿಗಳಲ್ಲಿ ಬೆಂಕಿ ಹೊತ್ತಿಕೊಂಡಾಗ ಸುಡುವುದು ಕಟ್ಟಡಗಳನ್ನಷ್ಟೇ ಅಲ್ಲ, ಆಡಳಿತದ ಮೇಲಿನ ಜನರ ವಿಶ್ವಾಸವನ್ನೂ ಹೌದೇ ಎಂಬ ಪ್ರಶ್ನೆ ಎದುರಾಗುತ್ತದೆ. ಪೊಲೀಸ್ ವಾಹನಗಳು ಹೊತ್ತಿ ಉರಿಯುತ್ತಿವೆ, ಅಂಗಡಿಗಳು ಲೂಟಿಯಾಗುತ್ತಿವೆ, ಐತಿಹಾಸಿಕ ಕಟ್ಟಡಗಳ ಛಾವಣಿಗಳು ಕುಸಿಯುತ್ತಿವೆ. ಇಂತಹ ಸಂದರ್ಭದಲ್ಲಿ ಪ್ರತಿಭಟನೆಯನ್ನು ಸಂಪೂರ್ಣವಾಗಿ ಅರಾಜಕತೆಯೆಂದು ತಳ್ಳಿಹಾಕುವುದೂ ತಪ್ಪು; ಜನರ ಆಕ್ರೋಶದ ಹೆಸರಿನಲ್ಲಿ ನಡೆಯುವ ಹಿಂಸಾಚಾರವನ್ನು ಸಮರ್ಥಿಸುವುದೂ ತಪ್ಪು. ಫ್ರಾನ್ಸ್ ಇಂದು ಎದುರಿಸುತ್ತಿರುವ ಬಿಕ್ಕಟ್ಟಿನ ಸಾರವೇ ಇದು:ಇದು ನ್ಯಾಯಕ್ಕಾಗಿ ಎದ್ದ ಜನಧ್ವನಿಯೇ, ಆಕ್ರೋಶದ ನೆರಳಲ್ಲಿ ಬೆಳೆಯುತ್ತಿರುವ ಅರಾಜಕತೆಯೋ?

ಅಕ್ಟೋಬರ್ 17ರ ಪ್ರತಿಭಟನೆಗಳಲ್ಲಿ ಲಕ್ಷಾಂತರ ಜನರು ಬೀದಿಗಿಳಿದಿದ್ದಾರೆ ಎಂಬ ವರದಿಗಳು ಹೊರಬಂದಿವೆ. ಪ್ರತಿಭಟನಾಕಾರರ ಸಂಖ್ಯೆಯ ಕುರಿತು ಸರ್ಕಾರ ಮತ್ತು ಕಾರ್ಮಿಕ ಸಂಘಟನೆಗಳ ಅಂದಾಜುಗಳಲ್ಲಿ ವ್ಯತ್ಯಾಸವಿದ್ದರೂ, ಪ್ರತಿಭಟನೆಯ ವ್ಯಾಪಕತೆ ದೇಶದೊಳಗಿನ ಅಸಮಾಧಾನದ ತೀವ್ರತೆಯನ್ನು ಸೂಚಿಸುತ್ತದೆ. ಆದರೆ ದಿನದ ಅಂತ್ಯದಲ್ಲಿ ಚರ್ಚೆಯ ಕೇಂದ್ರವಾದದ್ದು ಜನರ ಬೇಡಿಕೆಗಳಿಗಿಂತ ಬೆಂಕಿ, ಧ್ವಂಸ ಮತ್ತು ಲೂಟಿ.

**ಲಿಮೋಜಸ್‌ನ ಬೆಂಕಿ: ಹೊತ್ತಿ ಉರಿದ ಇತಿಹಾಸ!**




ಲಿಮೋಜಸ್ ನಗರದಲ್ಲಿ ಸುಮಾರು 143 ವರ್ಷಗಳ ಇತಿಹಾಸ ಹೊಂದಿದ್ದ ಪುರಾತನ ಕಟ್ಟಡಕ್ಕೆ ಬೆಂಕಿ ತಗುಲಿ, ಛಾವಣಿ ಕುಸಿದಿದೆ ಎಂಬ ವರದಿಗಳು ಫ್ರಾನ್ಸ್‌ನ ಪರಿಸ್ಥಿತಿಯ ಗಂಭೀರತೆಯನ್ನು ಬಯಲಿಗೆಳೆದಿವೆ. ಪೊಲೀಸ್ ವಾಹನಕ್ಕೆ ಬೆಂಕಿ ಹಚ್ಚುವುದು, ಕಟ್ಟಡಗಳ ಕಿಟಕಿಗಳನ್ನು ಒಡೆದು ಒಳನುಗ್ಗುವುದು ಮತ್ತು ಅಂಗಡಿಗಳನ್ನು ಲೂಟಿ ಮಾಡುವುದು ಯಾವುದೇ ಪ್ರತಿಭಟನೆಯ ನ್ಯಾಯಸಮ್ಮತ ಭಾಗವಾಗಲಾರದು.

ಸಾರ್ವಜನಿಕ ಕಟ್ಟಡವೆಂದರೆ ಅದು ಸರ್ಕಾರದ ಆಸ್ತಿಯಷ್ಟೇ ಅಲ್ಲ; ಜನರ ತೆರಿಗೆ ಹಣದಿಂದ ನಿರ್ಮಿಸಲ್ಪಟ್ಟ ಸಾರ್ವಜನಿಕ ಸಂಪತ್ತು. ಐತಿಹಾಸಿಕ ಕಟ್ಟಡವೆಂದರೆ ಒಂದು ನಗರದ ಸಂಸ್ಕೃತಿ ಮತ್ತು ನೆನಪುಗಳ ಪ್ರತೀಕ. ಅದನ್ನು ಸುಡುವುದರಿಂದ ಸರ್ಕಾರಕ್ಕೆ ಶಿಕ್ಷೆಯಾಗುವುದಿಲ್ಲ; ನಷ್ಟ ಅನುಭವಿಸುವುದು ಸಮಾಜವೇ.

ಆದರೆ ಇನ್ನೊಂದು ಪ್ರಶ್ನೆಯೂ ಇದೆ. ಜನರ ಅಸಮಾಧಾನ ಈ ಮಟ್ಟಕ್ಕೆ ತಲುಪುವವರೆಗೆ ಆಡಳಿತ ಏನು ಮಾಡುತ್ತಿತ್ತು? ಬೆಂಕಿ ಹೊತ್ತಿಕೊಂಡ ನಂತರ ಪರಿಸ್ಥಿತಿ ನಿಯಂತ್ರಿಸಲು ಮುಂದಾಗುವ ಸರ್ಕಾರ, ಸಮಸ್ಯೆಗಳು ಉಲ್ಬಣಿಸುವ ಮೊದಲೇ ಪರಿಹಾರ ಕಂಡುಕೊಳ್ಳಬೇಕಿರಲಿಲ್ಲವೇ?

ಶಾಲೆಗಳ ದುಸ್ಥಿತಿ: ಯುವಜನರ ಆಕ್ರೋಶಕ್ಕೆ ಕಾರಣವೇನು?

ಈ ಪ್ರತಿಭಟನೆಯ ಹಿನ್ನೆಲೆಯಲ್ಲಿರುವ ಪ್ರಮುಖ ಅಂಶಗಳೆಂದರೆ ಶಿಥಿಲ ಶಾಲಾ ಕಟ್ಟಡಗಳು, ಶಿಕ್ಷಕರ ಕೊರತೆ, ಶಿಕ್ಷಣ ಕ್ಷೇತ್ರದ ಸಂಪನ್ಮೂಲಗಳ ಅಭಾವ ಮತ್ತು ಸರ್ಕಾರದ ಮಿತವ್ಯಯ ಕ್ರಮಗಳ ವಿರುದ್ಧದ ಅಸಮಾಧಾನ ಎಂಬ ವರದಿಗಳಿವೆ.

ಒಂದು ದೇಶದ ಭವಿಷ್ಯವನ್ನು ರೂಪಿಸಬೇಕಾದ ಶಾಲೆಗಳೇ ಮೂಲಸೌಕರ್ಯದ ಕೊರತೆಯಿಂದ ಬಳಲುತ್ತಿದ್ದರೆ, ವಿದ್ಯಾರ್ಥಿಗಳಲ್ಲಿ ಆಕ್ರೋಶ ಮೂಡುವುದು ಅಸಹಜವಲ್ಲ. ಗುಣಮಟ್ಟದ ಶಿಕ್ಷಣ ಶ್ರೀಮಂತರ ಮಕ್ಕಳಿಗೆ ಮಾತ್ರ ಸೀಮಿತವಾಗದೆ ಪ್ರತಿಯೊಬ್ಬರಿಗೂ ದೊರೆಯಬೇಕು. ಇಲ್ಲದಿದ್ದರೆ ಸಾಮಾಜಿಕ ಅಸಮಾನತೆ ಮುಂದಿನ ಪೀಳಿಗೆಗೂ ವರ್ಗಾವಣೆಯಾಗುತ್ತದೆ.

ಆದರೆ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವುದೆಂದರೆ ಹಿಂಸಾಚಾರವನ್ನು ಒಪ್ಪಿಕೊಳ್ಳುವುದಲ್ಲ. ಶಾಂತಿಯುತವಾಗಿ ಪ್ರತಿಭಟಿಸುವವರ ಹಕ್ಕುಗಳನ್ನು ರಕ್ಷಿಸಬೇಕು; ಸಾರ್ವಜನಿಕ ಆಸ್ತಿಗೆ ಹಾನಿ ಮಾಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಪ್ರತಿಭಟನೆಯಲ್ಲಿ ಭಾಗವಹಿಸಿದ ಎಲ್ಲರನ್ನೂ ಹಿಂಸಾಚಾರಿಗಳೆಂದು ಬಿಂಬಿಸುವುದೂ ನ್ಯಾಯವಲ್ಲ.

**ಪೊಲೀಸ್ ಬಲಪ್ರಯೋಗ: ಕಾನೂನು ಎಲ್ಲರಿಗೂ ಒಂದೇ!**

ಪ್ರತಿಭಟನೆಗಳ ಸಂದರ್ಭದಲ್ಲಿ ವಿದ್ಯಾರ್ಥಿಗಳು, ಶಾಲಾ ಸಿಬ್ಬಂದಿ ಮತ್ತು ಪೊಲೀಸರು ಗಾಯಗೊಂಡಿರುವ ಬಗ್ಗೆ ವರದಿಗಳಿವೆ. ಪೊಲೀಸ್ ಗ್ರೆನೇಡ್‌ನಿಂದ 15 ವರ್ಷದ ಬಾಲಕನಿಗೆ ಗಂಭೀರ ಗಾಯವಾದ ಘಟನೆ ವರದಿಯಾಗಿದ್ದರೆ, ಅದರ ಕುರಿತು ಸ್ವತಂತ್ರ ತನಿಖೆ ಅಗತ್ಯ.

ಪೊಲೀಸರ ಮೇಲೆ ದಾಳಿ ನಡೆಸುವುದನ್ನು ಖಂಡಿಸಬೇಕು. ಅದೇ ರೀತಿ, ಪೊಲೀಸರಿಂದ ಅನಗತ್ಯ ಅಥವಾ ಅತಿಯಾದ ಬಲಪ್ರಯೋಗ ನಡೆದಿದ್ದರೆ ಅದನ್ನೂ ಪ್ರಶ್ನಿಸಬೇಕು. ಕಾನೂನು ಸುವ್ಯವಸ್ಥೆ ಕಾಪಾಡುವುದು ಪೊಲೀಸರ ಕರ್ತವ್ಯವಾದರೂ, ಅಧಿಕಾರದ ಬಳಕೆ ಕಾನೂನಿನ ಮಿತಿಯೊಳಗಿರಬೇಕು.

ಪೊಲೀಸರ ತಪ್ಪನ್ನು ಪ್ರಶ್ನಿಸುವವರು ಪ್ರತಿಭಟನಾಕಾರರ ಹಿಂಸೆಯನ್ನೂ ಖಂಡಿಸಬೇಕು; ಪ್ರತಿಭಟನಾಕಾರರ ಹಿಂಸೆಯನ್ನು ಖಂಡಿಸುವವರು ಪೊಲೀಸ್ ಬಲಪ್ರಯೋಗದ ತನಿಖೆಯನ್ನೂ ಬೆಂಬಲಿಸಬೇಕು. ನ್ಯಾಯವೆಂದರೆ ಎಲ್ಲರಿಗೂ ಒಂದೇ ಮಾನದಂಡ ಅನ್ವಯಿಸುವುದು.

ಮ್ಯಾಕ್ರನ್ ಆಡಳಿತದ ಸಂಕಷ್ಟ: ಕಠಿಣ ಕ್ರಮವೇ ಪರಿಹಾರವೇ?

ಫ್ರಾನ್ಸ್‌ನ ಬಿಕ್ಕಟ್ಟನ್ನು ಕೇವಲ ವಿದ್ಯಾರ್ಥಿಗಳ ಪ್ರತಿಭಟನೆಗೆ ಸೀಮಿತಗೊಳಿಸಲಾಗದು. ರಾಜಕೀಯ ಅಸ್ಥಿರತೆ, ಬಜೆಟ್ ಕುರಿತ ಸಂಘರ್ಷಗಳು, ಸಾರ್ವಜನಿಕ ವೆಚ್ಚದ ಕಡಿತ ಮತ್ತು ಸರ್ಕಾರದ ಮೇಲಿನ ಜನರ ವಿಶ್ವಾಸದ ಪ್ರಶ್ನೆಗಳು ಈ ಪರಿಸ್ಥಿತಿಯ ಹಿನ್ನೆಲೆಯಲ್ಲಿವೆ.

ಹಣಕಾಸಿನ ಶಿಸ್ತಿಗಾಗಿ ಸರ್ಕಾರ ವೆಚ್ಚ ಕಡಿತಗೊಳಿಸಬಹುದು. ಆದರೆ ಅದರ ಹೊರೆ ಶಾಲೆಗಳು, ಆಸ್ಪತ್ರೆಗಳು, ಕಾರ್ಮಿಕರು ಮತ್ತು ಕಡಿಮೆ ಆದಾಯದ ಕುಟುಂಬಗಳ ಮೇಲೆ ಬಿದ್ದರೆ, ಆರ್ಥಿಕ ನೀತಿಯ




ಸಾಮಾಜಿಕ ಪರಿಣಾಮಗಳಿಗೆ ಆಡಳಿತ ಉತ್ತರಿಸಲೇಬೇಕು.

ಪ್ರತಿಭಟನೆಗಳ ಬಳಿಕ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಹಿಂಸಾಚಾರದ ವಿರುದ್ಧ ಕಠಿಣ ಕ್ರಮದ ಭರವಸೆ ನೀಡಿದ್ದಾರೆ ಎಂಬ ವರದಿಗಳಿವೆ. ಆದರೆ ಪ್ರತಿಭಟನೆಗಳನ್ನು ನಿಷೇಧಿಸುವುದು ಅಥವಾ ಬಂಧನಗಳನ್ನು ಹೆಚ್ಚಿಸುವುದು ಮಾತ್ರ ಸಮಸ್ಯೆಗೆ ಶಾಶ್ವತ ಪರಿಹಾರವಲ್ಲ. ಶಾಲೆಗಳ ದುಸ್ಥಿತಿ, ಶಿಕ್ಷಕರ ಕೊರತೆ ಮತ್ತು ಆರ್ಥಿಕ ಒತ್ತಡಗಳು ಮುಂದುವರಿದರೆ ಅಸಮಾಧಾನ ಮತ್ತೆ ಭುಗಿಲೇಳಬಹುದು.

ಶಾಂತಿ ಎಂದರೆ ಜನರ ಧ್ವನಿಯನ್ನು ಅಡಗಿಸುವುದಲ್ಲ; ಅವರ ಸಮಸ್ಯೆಗಳಿಗೆ ನ್ಯಾಯಯುತ ಪರಿಹಾರ ಕಲ್ಪಿಸುವುದು.

**ಮೆರಿನ್ ಲೆ ಪೆನ್‌ಗೆ ರಾಜಕೀಯ ಲಾಭವೇ?**

ಸರ್ಕಾರದ ವಿರುದ್ಧದ ಅಸಮಾಧಾನವನ್ನು ವಿರೋಧ ಪಕ್ಷಗಳು




ರಾಜಕೀಯವಾಗಿ ಬಳಸಿಕೊಳ್ಳುವುದು ಸಹಜ. ಮೆರಿನ್ ಲೆ ಪೆನ್ ಸರ್ಕಾರವನ್ನು ಟೀಕಿಸಿರುವುದು ಫ್ರಾನ್ಸ್‌ನ ಅಧಿಕಾರ ರಾಜಕಾರಣದ ಭಾಗವಾಗಿದೆ. ಆದರೆ ಆಡಳಿತವನ್ನು ಟೀಕಿಸುವುದಷ್ಟೇ ಸಾಕಾಗುವುದಿಲ್ಲ. ಅಧಿಕಾರಕ್ಕೆ ಬಂದರೆ ಶಾಲೆಗಳ ಸಮಸ್ಯೆ, ಸಾರ್ವಜನಿಕ ಸೇವೆಗಳ ಗುಣಮಟ್ಟ ಮತ್ತು ಆರ್ಥಿಕ ಅಸಮಾನತೆಯನ್ನು ಹೇಗೆ ಪರಿಹರಿಸುತ್ತಾರೆ ಎಂಬುದನ್ನೂ ವಿರೋಧ ಪಕ್ಷಗಳು ಸ್ಪಷ್ಟಪಡಿಸಬೇಕು.

ಜನರ ಆಕ್ರೋಶದಿಂದ ಯಾರಿಗೆ ರಾಜಕೀಯ ಲಾಭವಾಗುತ್ತದೆ



ಎನ್ನುವುದಕ್ಕಿಂತ, ಆಕ್ರೋಶಕ್ಕೆ ಕಾರಣವಾದ ಸಮಸ್ಯೆಗಳನ್ನು ಯಾರು ಪರಿಹರಿಸುತ್ತಾರೆ ಎಂಬುದೇ ಮುಖ್ಯ.

**ಟ್ರಂಪ್‌ರ ಹೇಳಿಕೆ: ಪ್ರತಿಭಟನೆಗೆ ಧರ್ಮದ ಬಣ್ಣ ಏಕೆ?**

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಫ್ರಾನ್ಸ್‌ನ ಅಶಾಂತಿಯನ್ನು ಇಸ್ಲಾಂ ಮತ್ತು ವಲಸೆಯ ವಿಚಾರಗಳಿಗೆ ಜೋಡಿಸಿ ಹೇಳಿಕೆ ನೀಡಿದ್ದಾರೆ ಎಂಬ ವರದಿಗಳು ಚರ್ಚೆಗೆ ಕಾರಣವಾಗಿವೆ. ಆದರೆ ಶಾಲೆಗಳ ದುಸ್ಥಿತಿ ಮತ್ತು ಯುವಜನರ ಅಸಮಾಧಾನವೇ ಪ್ರತಿಭಟನೆಯ ಹಿನ್ನೆಲೆಯಾಗಿದ್ದರೆ, ಅದನ್ನು ಧಾರ್ಮಿಕ ಸಂಘರ್ಷವೆಂದು ಬಿಂಬಿಸಲು ಯಾವ ಪುರಾವೆಗಳಿವೆ?

ವಲಸೆ ಮತ್ತು ಧಾರ್ಮಿಕ ಗುರುತುಗಳು ಫ್ರಾನ್ಸ್‌ನ ರಾಜಕೀಯ ಚರ್ಚೆಯ ಭಾಗವಾಗಿರಬಹುದು. ಆದರೆ ಅದೇ ಕಾರಣಕ್ಕೆ ಪ್ರತಿಯೊಂದು ಪ್ರತಿಭಟನೆಯ ಹಿಂದೆಯೂ ಧಾರ್ಮಿಕ ಉದ್ದೇಶವಿದೆ ಎಂದು ತೀರ್ಮಾನಿಸಲಾಗದು. ಹಿಂಸಾಚಾರದಲ್ಲಿ ಭಾಗವಹಿಸಿದವರ ಪಾತ್ರವನ್ನು ಸಾಕ್ಷ್ಯಾಧಾರಗಳ ಮೂಲಕ ನಿರ್ಧರಿಸಬೇಕು; ಒಬ್ಬರ ತಪ್ಪಿಗೆ ಇಡೀ ಸಮುದಾಯವನ್ನು ಹೊಣೆಗಾರರನ್ನಾಗಿಸಬಾರದು.

ಅಮೆರಿಕದ ರಾಜಕೀಯದಲ್ಲಿಯೂ ವಲಸೆ ಮತ್ತು ಧಾರ್ಮಿಕ ಗುರುತುಗಳು ಪ್ರಮುಖ ಚರ್ಚೆಯ ವಿಷಯಗಳಾಗಿವೆ. ಹೀಗಾಗಿ ಇಂತಹ ಹೇಳಿಕೆಗಳ ರಾಜಕೀಯ ಪರಿಣಾಮವನ್ನು ಪರಿಶೀಲಿಸುವುದು ಅಗತ್ಯ. ಆದರೆ ಯಾವುದೇ ಹೇಳಿಕೆಯ ಹಿಂದಿನ ಉದ್ದೇಶವನ್ನು ನಿರ್ಧರಿಸುವಾಗಲೂ ಸಾಕ್ಷ್ಯಕ್ಕೆ ಆದ್ಯತೆ ನೀಡಬೇಕು.

**ಸಂಚಿನ ರಾಜಕಾರಣವೋ, ಜನರ ಅಸಮಾಧಾನವೋ?**

ಪ್ರತಿಭಟನೆಗಳ ಹಿಂದೆ ಸಂಘಟಿತ ಸಂಚು ಇದೆಯೇ ಎಂಬ ಪ್ರಶ್ನೆ ಉದ್ಭವಿಸಬಹುದು. ಹಿಂಸಾಚಾರದಲ್ಲಿ ಸಂಘಟಿತ ಗುಂಪುಗಳು ಭಾಗವಹಿಸಿದ್ದರೆ ತನಿಖೆ ನಡೆಯಬೇಕು. ಆದರೆ ಸಾಕ್ಷ್ಯವಿಲ್ಲದೆ ಇಡೀ ಚಳವಳಿಯನ್ನು ಸಂಚು ಎಂದು ಕರೆಯುವುದು ಸರಿಯಲ್ಲ.

ಶಾಂತಿಯುತ ಪ್ರತಿಭಟನಾಕಾರರು, ಹಿಂಸಾಚಾರದಲ್ಲಿ ತೊಡಗಿದವರು ಮತ್ತು ಪರಿಸ್ಥಿತಿಯನ್ನು ರಾಜಕೀಯವಾಗಿ ಬಳಸಿಕೊಳ್ಳುವ ಸಂಘಟನೆಗಳನ್ನು ಪ್ರತ್ಯೇಕವಾಗಿ ಗುರುತಿಸಬೇಕು. ತನಿಖೆ ಪಾರದರ್ಶಕವಾಗಿರಬೇಕು; ವದಂತಿಗಳ ಬದಲು ಸತ್ಯಾಂಶಗಳ ಆಧಾರದಲ್ಲಿ ಕ್ರಮ ಕೈಗೊಳ್ಳಬೇಕು.

**ಕೊನೆಯ ಮಾತು: ಬೆಂಕಿ ಆರಿಸುವುದಷ್ಟೇ ಸಾಲದು!**

ಫ್ರಾನ್ಸ್ ಎದುರಿಸುತ್ತಿರುವ ಸವಾಲು ಎರಡು ಮುಖಗಳನ್ನು ಹೊಂದಿದೆ. ಒಂದು, ಹಿಂಸಾಚಾರವನ್ನು ನಿಯಂತ್ರಿಸಿ ಜನರ ಜೀವ ಮತ್ತು ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು. ಮತ್ತೊಂದು, ಜನರು ಬೀದಿಗಿಳಿಯುವಂತೆ ಮಾಡಿದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು.

ಮೊದಲನೆಯದನ್ನು ನಿರ್ಲಕ್ಷಿಸಿದರೆ ಅರಾಜಕತೆ ಬೆಳೆಯುತ್ತದೆ; ಎರಡನೆಯದನ್ನು ಕಡೆಗಣಿಸಿದರೆ ಅಸಮಾಧಾನ ಮತ್ತೆ ಮತ್ತೆ ಸ್ಫೋಟಗೊಳ್ಳುತ್ತದೆ.

ಹಿಂಸಾಚಾರ ನಡೆಸಿದವರಿಗೆ ಕಾನೂನಿನ ಶಿಕ್ಷೆಯಾಗಬೇಕು. ಪೊಲೀಸ್ ಬಲಪ್ರಯೋಗದ ದೂರುಗಳನ್ನೂ ತನಿಖೆ ಮಾಡಬೇಕು. ವಿದ್ಯಾರ್ಥಿಗಳ ಬೇಡಿಕೆಗಳಿಗೆ ಸರ್ಕಾರ ಉತ್ತರಿಸಬೇಕು. ಧರ್ಮದ ಹೆಸರಿನಲ್ಲಿ ಪುರಾವೆಯಿಲ್ಲದ ಆರೋಪ ಮಾಡುವವರನ್ನೂ ಪ್ರಶ್ನಿಸಬೇಕು.

ಪ್ರಜಾಪ್ರಭುತ್ವದಲ್ಲಿ ಜನರ ಆಕ್ರೋಶವನ್ನು ನಿರ್ಲಕ್ಷಿಸುವುದು




ಆಡಳಿತದ ದೌರ್ಬಲ್ಯ; ಹಿಂಸಾಚಾರವನ್ನು ಸಮರ್ಥಿಸುವುದು ಸಮಾಜದ ದೌರ್ಬಲ್ಯ.

ಫ್ರಾನ್ಸ್‌ನ ಬೀದಿಗಳಲ್ಲಿ ಹೊತ್ತಿಕೊಂಡ ಬೆಂಕಿ ಆರಬಹುದು. ಹಾನಿಗೊಳಗಾದ ಕಟ್ಟಡಗಳನ್ನು ಮರುನಿರ್ಮಿಸಬಹುದು. ಆದರೆ ಜನರ ವಿಶ್ವಾಸವನ್ನು ಮರಳಿ ಗಳಿಸಲು ಘೋಷಣೆಗಳಿಗಿಂತ ನ್ಯಾಯಯುತ ಆಡಳಿತ, ಗುಣಮಟ್ಟದ ಸಾರ್ವಜನಿಕ ಸೇವೆಗಳು ಮತ್ತು ಜವಾಬ್ದಾರಿಯುತ ರಾಜಕಾರಣ ಅಗತ್ಯ.

ಏಕೆಂದರೆ ಬೆಂಕಿ ಬೀದಿಗಳಲ್ಲಿ ಹೊತ್ತಿಕೊಂಡಾಗ ಅದನ್ನು ಆರಿಸುವುದು ಸರ್ಕಾರದ ಕರ್ತವ್ಯ; ಆದರೆ ಜನರ ಮನಸ್ಸಿನಲ್ಲಿ ಆ ಬೆಂಕಿ ಹೊತ್ತಿಕೊಳ್ಳಲು ಕಾರಣವಾದ ಸಮಸ್ಯೆಗಳನ್ನು ಪರಿಹರಿಸುವುದೇ ನಿಜವಾದ ನಾಯಕತ್ವ.



## ಸೂರ್ಯಕಾಂತಿ ಬೆಳೆ ಕ್ಷೇತ್ರೋತ್ಸವ

ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲೂಕಿನ ಭೋಗನಳ್ಳಿ ಗ್ರಾಮದ ರೈತರ ಹೊಲಗಳಲ್ಲಿ ತೊಗರಿಯಲ್ಲಿ ಅಂತರಬೆಳೆಯಾಗಿ ಬೆಳೆದಿರುವ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ಆರ್‌ಎಸ್‌ಎಸ್‌ಹೆಚ್–700 ಹೈಬ್ರಿಡ್ ತಳಿಯ ಸೂರ್ಯಕಾಂತಿ ಬೆಳೆಯ ಕ್ಷೇತ್ರೋತ್ಸವವನ್ನು ಕಲಬುರಗಿಯ ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರದ ವತಿಯಿಂದ ಪ್ರಗತಿಪರ ರೈತರಾದ ಅಬ್ದುಲ್ ಲತೀಫ್ ಪಟೇಲ್ ಹೊಲದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಲಬುರಗಿ ಕೃಷಿ ವಿಜ್ಞಾನ ಕೇಂದ್ರ ಬೇಸಾಯಶಾಸ್ತ್ರ ವಿಜ್ಞಾನಿ ಡಾ. ಯುಸುಸಅಲಿ ನಿಂಬರಗಿ ಮಾತನಾಡಿ ತೊಗರಿಯಲ್ಲಿ ಅಂತರ ಬೆಳೆಯಾಗಿ ತೇವಾಂಶದ ಕೊರತೆಯ ನಡುವೆಯೂ ಸೂರ್ಯಕಾಂತಿ ಬೆಳೆದು ಯಶ

ಕಂಡಿದ್ದಾರೆ. ರೈತರು ಒಂದೇ ಬೆಳೆಗೆ ಸೀಮಿತರಾಗದೆ ಅಂತರಬೆಳೆಯಾಗಿ ಹಲವು ಬೆಳೆಗಳನ್ನು ಬೆಳೆಯುವುದರಿಂದ ಆರ್ಥಿಕವಾಗಿ ಲಾಭವನ್ನು ಪಡೆಯಬಹುದು. ತೊಗರಿಯಲ್ಲಿ ಸೂರ್ಯಕಾಂತಿ ಅಂತರಬೆಳೆಯಾಗಿ

ಬೆಳೆಯುವುದರಿಂದ ಕಡಿಮೆ ಅವಧಿಯಲ್ಲಿ ಹೆಚ್ಚಿನ ಲಾಭವನ್ನು ಪಡೆಯಬಹುದು ಇಂತಹ ಹಲವಾರು ತಾಂತ್ರಿಕತೆಗಳನ್ನು ಕೆವಿಕೆಯಿಂದ ಪಡೆದು ರೈತರು ಅಳವಡಿಸಿಕೊಂಡಾಗ ತಮ್ಮ ಆರ್ಥಿಕ ಪರಿಸ್ಥಿತಿಯನ್ನು

ಸುಧಾರಿಸಿಕೊಳ್ಳಬಹುದು ಎಂದರು. ಮಣ್ಣು ವಿಜ್ಞಾನಿ ಡಾ. ಶ್ರೀನಿವಾಸ ಬಿ. ವಿ, ಮಾತನಾಡಿ ರೈತ ಬಾಂಧವರು ಮಣ್ಣು ಪರೀಕ್ಷೆ ಆಧಾರದ ಮೇಲೆ ರಸಗೊಬ್ಬರಗಳನ್ನು ಬಳಸಿ ಹೆಚ್ಚೆಚ್ಚು ಸಾವಯವ ಮೂಲದ ಗೊಬ್ಬರಗಳನ್ನು ಬಳಸುವುದರಿಂದ ಮಣ್ಣಿನ ಆರೋಗ್ಯವನ್ನು ನಿರ್ವಹಿಸಿ ಉತ್ತಮ ಫಲಿತಾಂಶ ಪಡೆಯಬಹುದು ಜೊತೆಗೆ ಯಾವುದೇ ತ್ಯಾಜ್ಯ ವಸ್ತುಗಳನ್ನು ಸುಡದೆ ಅದನ್ನು ಕೊಳೆಸಿ ಗೊಬ್ಬರವನ್ನಾಗಿ ಮಾಡಿ ಮರುಬಳಕೆ ಮಾಡುವುದರಿಂದ ಮಣ್ಣಿನ ಫಲವತ್ತತೆಯನ್ನು ಸುಧಾರಿಸಬಹುದೆಂದು ಹೇಳಿದರು. ಬಳಿಕ ವಿಜ್ಞಾನಿಗಳು ರೈತರೊಂದಿಗೆ ಚರ್ಚಿಸಿ ಸೂರ್ಯಕಾಂತಿ ಬೆಳೆಯ ಕುರಿತು ಸಮಾಲೋಚನೆ ನಡೆಸಿದರು.

ಗ್ರಾಮದ ರೈತರಾದ ಲತೀಫ್ ಪಟೇಲ್ ಹಾಗೂ ರಿಯಾಜ್ ಪಟೇಲರವರು ಯಶಸ್ವಿಯಾಗಿ ಬೆಳೆದಿರುವ ಸೂರ್ಯಕಾಂತಿ ಬೆಳೆಯನ್ನು ಹಲವು ರೈತರು ಖುದ್ದಾಗಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ರೈತರಾದ ಸಿದ್ದು ಹುಲಿ, ಸುಭಾಷ ಪಾಟೀಲ, ಈರಣ್ಣ ಸುತಾರ್, ಮಹಬೂಬ್ ನದಾಫ್, ಸಿಧನೂರ, ಬೊಗಪ್ಪ ಮಾಂಗ, ರಸೂಲ್ ಪಟೇಲ್ ಹಾಗೂ ರಶೀದ್ ಪಟೇಲ್ ಸೇರಿದಂತೆ ಅನೇಕ ರೈತ

## ಕೇಂದ್ರೀಯ ವಿವಿ ಕುಲಪತಿ ಸ್ಥಾನಕ್ಕೆ ಕನ್ನಡಿಗರ ನೇಮಕ ಮಾಡಿ: ಪಾಟೀಲ ನರಿಬೋಳ ಆಗ್ರಹ

ಕಲಬುರಗಿ: ಜಿಲ್ಲೆಯ ಕಡಗಂಚಿ ಬಳಿಯಿರೋ ರಾಜ್ಯದ ಏಕೈಕ ಕೇಂದ್ರಿಯ ವಿಶ್ವವಿದ್ಯಾಲಯದ ಕುಲಪತಿಗಳ ಸ್ಥಾನಕ್ಕೆ ಕನ್ನಡಿಗರನ್ನ ಆಯ್ಕೆ ಮಾಡಬೇಕು ಎಂದ ಕಲ್ಯಾಣ ಕರ್ನಾಟಕ ಪ್ರತ್ಯೇಕ ರಾಜ್ಯ ಹೋರಾಟ ಸಮಿತಿ ಅಧ್ಯಕ್ಷ ಎಂ.ಎಸ್.ಪಾಟೀಲ ನರಿಬೋಳ ಆಗ್ರಹಿಸಿದ್ದಾರೆ.

ಹಿಂದುಳಿದ ಭಾಗವಾದ ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿಯಲ್ಲಿ 2009 ರಲ್ಲಿ ಕೇಂದ್ರಿಯ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯವೂ ಈ ಭಾಗದ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಸಾಕಷ್ಟು ಪ್ರಯತ್ನ ಪಡುತ್ತಿದೆ. ಹೀಗಾಗಿ ನಮ್ಮ ನಾಡಿನಲ್ಲಿರೋ ವಿಶ್ವವಿದ್ಯಾಲಯಕ್ಕೆ ಕನ್ನಡಿಗರೇ ಕುಲಪತಿಗಳಾದರೇ ಮತ್ತಷ್ಟು ಅನೂಕುಲವಾಗುತ್ತೆ. ಇಲ್ಲಿನ ನೆಲ,ಜಲ,ಭಾಷೆ ಮತ್ತು ಮುಖ್ಯವಾಗಿ ಶೈಕ್ಷಣಿಕವಾಗಿ ಹಿಂದುಳಿದಿರೋ ಕಲ್ಯಾಣ




ಕರ್ನಾಟಕ ಭಾಗವನ್ನ ಮುನ್ನಲೇಗೆ ತರುವದಕ್ಕೆ ಮತ್ತಷ್ಟು ಅನೂಕುಲವಾಗುತ್ತೆ. ಈ ಮೊದಲು ಕನ್ನಡಿಗರನ್ನೆ ಕುಲಪತಿಗಳನ್ನಾಗಿ ನೇಮಕ ಮಾಡಲಾಗುತ್ತಿತ್ತು. ಆದರೆ ಕೇಂದ್ರದಲ್ಲಿ ಎನ್ಡಿಎ ಸರ್ಕಾರ ಬಂದ ಮೇಲೆ ಕಳೆದ ಐದು ವರ್ಷಗಳಿಂದ ಅನ್ಯ ರಾಜ್ಯದವರನ್ನ ಕುಲಪತಿಗಳನ್ನಾಗಿ ನೇಮಿಸಲಾಗುತ್ತಿದೆ. ಇದರಿಂದ ವಿಶ್ವವಿದ್ಯಾಲಯದಲ್ಲಿ ಸಾಕಷ್ಟು ಸಮಸ್ಯೆಗಳು ಸೃಷ್ಟಿಯಾಗುತ್ತಿರುವುದಲ್ಲದೆ ಬಹಳಷ್ಟು ಕನ್ನಡಿಗರಿಗೆ ನೇಮಕಾತಿ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಅನ್ಯಾಯವಾಗಿದೆ. ಎಲ್ಲ ಹುದ್ದೆಗಳಲ್ಲಿ ಹೊರ ರಾಜ್ಯದವರನ್ನು ನೇಮಕ ಮಾಡಲಾಗುತ್ತಿದೆ. ವಿವಿ ಹೀಗಾಗಿ ಈ ಭಾರಿಯೂ ಹೊರರಾಜ್ಯದವರನ್ನೆ ಕುಲಪತಿಗಳನ್ನಾಗಿ ನೇಮಿಸೋ ಚಿಂತನೆ ನಡೆದಿದೆ ಎಂದು ತಿಳಿದುಬಂದಿದ್ದು, ಹಾಗೊಂದು ವೇಳೆ ಕೇಂದ್ರ ಸರ್ಕಾರ ಹೊರ ರಾಜ್ಯದವರನ್ನು ಕುಲಪತಿಯಾಗಿ ನೇಮಕ ಮಾಡಿದರೆ ಮತ್ತೊಮ್ಮೆ ಕನ್ನಡಿಗರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಹೀಗಾಗಿ ಯಾರೇ ಆಗಲಿ ಕನ್ನಡಿಗರನ್ನೆ ನೇಮಕ ಮಾಡಿ . ಒಂದು ವೇಳೆ ನೇಮಕ ಮಾಡದೇ ಹೋದರೆ ಕೇಂದ್ರ ಸರ್ಕಾರದ ಕಛೇರಿಗಳಾದ ರೈಲ್ವೆ ನಿಲ್ದಾಣ, ಬಿಜೆಪಿ ಕಛೇರಿಗೆ ಮುತ್ತಿಗೆ ಸೇರಿ ರಾಜ್ಯದ ಎಲ್ಲಾ ಕನ್ನಡಪರ ಸಂಘಟನೆಗಳಿಂದ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ.

## 7ನೇ ವರ್ಷದ ದಾಂಡಿಯಾ ಉತ್ಸವ



ಕಲಬುರಗಿ: ದಾಂಡಿಯಾ ಉತ್ಸವಗಳು ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ, ಜನರಲ್ಲಿ ಸೌಹಾರ್ದ ಮತ್ತು ಒಗ್ಗಟ್ಟಿನ ಭಾವನೆ ಬೆಳೆಸುತ್ತವೆ ಎಂದು ಶಾಸಕ ಅಲ್ಲಮಪ್ರಭು ಪಾಟೀಲ ಹೇಳಿದರು.

ನಗರದ ಸಾಯಿರಾಂ ನಗರದ ವಿ.ಎಲ್. ಪಾಟೀಲ ಕಲ್ಯಾಣ ಮಂಟಪದಲ್ಲಿ ಸಾಯಿರಾಂ ಯುವಕ ಸಂಘ ಹಾಗೂ ಸಾಯಿರಾಂ ಲೇಡೀಸ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ 7ನೇ ವರ್ಷದ ದಾಂಡಿಯಾ ಉತ್ಸವದ ಉದ್ಘಾಟನಾ ಸಮಾರಂಭ ಮತ್ತು ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಕಲಬುರಗಿ ಮಹಾನಗರ ಪಾಲಿಕೆಯ ಮಾಜಿ ಉಪಮೇಯರ್ ಮಹೇಶ ಹೊಸೂರಕರ್, ವೈದ್ಯಾಧಿಕಾರಿ ಡಾ. ರವೀಂದ್ರ ಪಾಟೀಲ, ವರ್ಗ–1 ಗುತ್ತಿಗೆದಾರ ಎಂ.ಕೆ. ಪಾಟೀಲ, ವಾಣಿಜ್ಯ ತೆರಿಗೆ ಅಧಿಕಾರಿ ಶಿವಕುಮಾರ್ ಭೋಗಶೆಟ್ಟಿ, ಗಣೇಶ ಸೆರಾಮಿನ ಸುಭಾಷ್ ಹಡಪದ್, ಐಶ್ವರ್ಯ ಸಿಮೆಂಟ್ ಏಜೆನ್ಸಿಯ ನಿಂಗಪ್ಪ ಯಾಳಗಿ, ಆಂದೋಲಾ ಅಸೋಸಿಯೇನ ಕುಶಾಲ ಆಂದೋಲ, ಸಾಯಿರಾಂ ನಗರದ ಮಲ್ಲಿಕಾರ್ಜುನ ಪೂಜಾರಿ, ಚನ್ನಬಸವ ದೇಶಮುಖ, ರವಿ ಪೂಜಾರಿ, ನಾಗರೆಡ್ಡಿ, ವೈಭವ ಹೊಸೂರಕರ್, ಕಾರ್ತಿಕ್, ಪಿಂಟು, ಶ್ವೇತಾ, ಶರಣಮ್ಮ, ಸೌಮ್ಯಶ್ರೀ, ರಕ್ಷಿತಾ, ಭಾಗ್ಯಶ್ರೀ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಉತ್ಸವದಲ್ಲಿ ಭಾಗವಹಿಸಿದ್ದವರಿಗೆ ಹಾಗೂ ವಿಜೇತರಿಗೆ ಬಹುಮಾನ ವಿತರಿಸುವ ಮೂಲಕ ಕಾರ್ಯಕ್ರಮಕ್ಕೆ ಮೆರುಗು ನೀಡಲಾಯಿತು.

## ಜೀವವಿಮೆ ಹಣ ಕೊಡಿಸುವುದಾಗಿ ನಂಬಿಸಿ ಮಹಿಳೆಗೆ 4.73 ಲಕ್ಷ ರೂ.ವಂಚನೆ

ಕಲಬುರಗಿ:ಜೀವವಿಮೆ ಹಣ ಮತ್ತು ಪ್ರತಿಮೆ ಹೆಸರಿನಲ್ಲಿ ಸರ್ಕಾರಿ ಅನುದಾನ ಕೊಡಿಸುವುದಾಗಿ ಸಳ್ಳು ಭರವಸೆ ನೀಡಿ ಮಹಿಳೆಯೊಬ್ಬರಿಗೆ 4,73,800 ರೂ.ವಂಚನೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ನಗರದ ಹೀರಾಪುರ ಜಿಡಿಎ ಬಡಾವಣೆಯ ಚಂದ್ರಕಲಾ ರಾಜಕುಮಾರ ಮಾವಿನ್ ಎಂಬುವವರೆ ವಂಚನೆಗೆ ಒಳಗಾಗಿದ್ದು, ಅವರು ಈ ಸಂಬಂಧ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ದೂರು ಸಲ್ಲಿಸಿದ್ದಾರೆ.

ಚಂದ್ರಕಲಾ ಅವರ ಪತಿ ರಾಜಕುಮಾರ ಅವರು 2021ರಲ್ಲಿ ಕರ್ತವ್ಯ ನಿರತ ಸಮಯದಲ್ಲಿ ಫೈರಿಂಗ್ ವೇಳೆಯಲ್ಲಿ ಮೃತಪಟ್ಟಿದ್ದಾರೆ.

ಚಂದ್ರಕಲಾ ಅವರ ಮೊಬೈಲ್‌ಗೆ ಯಲ್ಲಪ್ಪ ಸುಬೇದಾರ ಎಂಬಾತ ಕರೆ ಮಾಡಿ ತಾನು ಕರ್ನಾಟಕದ ಬೆಳಗಾವಿಯನಾಗಿದ್ದು, ದೆಹಲಿ ರೆಕಾರ್ಡ್ ಆಫಿಸ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ನಿಮ್ಮ ಪತಿ ರಾಜಕುಮಾರ ಸರ್ವಿಸ್ 24 ವರ್ಷವಾಗಿದ್ದು, ರೆಕಾರ್ಡ್ ಬುಕ್ ಕ್ಲೋಸ್ ಮಾಡಲಾಗುತ್ತಿದೆ. ನಿಮ್ಮ ಮತ್ತು ನಿಮ್ಮ ಅತ್ತೆಯ ಹೆಸರಿನಲ್ಲಿ ಇನ್ಸುರೆನ್ಸ್ ಮಾಡಿಸಿದ್ದು, ಕಳೆದ ಐದು ವರ್ಷಗಳಿಂದ ಇನ್ಸುರೆನ್ಸ್ ಕಟ್ಟಿರುವುದಿಲ್ಲ. ಕಾರಣ ನೀವು ಪ್ರತಿಯೊಬ್ಬರು 84,700 ರೂ.ಕಟ್ಟಿದರೆ 17 ಲಕ್ಷ ರೂ.ಇನ್ಸುರೆನ್ಸ್ ಹಣ ಬರುತ್ತದೆ ಎಂದು ಸುಳ್ಳು ಹೇಳಿ ನಂಬಿಸಿ ಶ್ಯಾಮ್ ಬಿಹಾರಿ ಎಂಬಾತನ ಹೆಸರಿನಲ್ಲಿರುವ ಬ್ಯಾಂಕಿನ್ ಸ್ಕ್ಯಾನರ್ ಕಳುಹಿಸಿದ್ದಾನೆ. ಪತಿಯ ಬೆಟಾಲಿಯನ್ ಮತ್ತು ಮೃತಪಟ್ಟಿರುವ ಬಗ್ಗೆ ಹೇಳಿದ್ದರಿಂದ ಚಂದ್ರಕಲಾ ಅವರಿಗೆ ನಂಬಿಕೆ ಬಂದು ಇವರು ಶ್ಯಾಮ್ ಬಿಹಾರಿ ಹೆಸರಿನಲ್ಲಿರುವ ಬ್ಯಾಂಕ್ ಖಾತೆಗೆ 1,69,400 ರೂ.ವರ್ಗಾವಣೆ ಮಾಡಿದ್ದಾರೆ. ನಂತರ ವಂಚಕ ಇವರ ವಾಟ್ಸಪ್‌ಗೆ ಕರೆ ಮಾಡಿ ನಿಮ್ಮ ಪತಿಯ ಪ್ರತಿಮೆ ಮಾಡಿಸಲು ಸರ್ಕಾರದಿಂದ 25 ಲಕ್ಷ ಅನುದಾನ ಬರುವುದಿದ್ದು, 1.35 ಲಕ್ಷ ಹಣ ವರ್ಗಾವಣೆ ಮಾಡುವಂತೆ ತಿಳಿಸಿದ್ದಾನೆ.

# ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪನಾ ದಿನ

## ರಾಷ್ಟ್ರಭಕ್ತಿ, ಸೇವೆ ಮತ್ತು ಸಂಸ್ಕಾರದ ಸಂಕಲ್ಪ

■ ಉದಯರಶ್ಮಿ ದಿನಪತ್ರಿಕೆ

ರಾಷ್ಟ್ರದ ಏಕತೆ, ಸಮಾಜದ ಸಂಘಟನೆ ಮತ್ತು ಸೇವಾ ಮನೋಭಾವಕ್ಕೆ ಪ್ರೇರಣೆಯಾದ ರಾಷ್ಟ್ರೀಯ ಸ್ವಯಂಸೇವಕ ಸಂಘ

ಭಾರತದ ಸಾಂಸ್ಕೃತಿಕ ಪರಂಪರೆ, ರಾಷ್ಟ್ರೀಯ ಚಿಂತನೆ, ಸಮಾಜ ಸಂಘಟನೆ ಹಾಗೂ ಸೇವಾ ಮನೋಭಾವದ ಕುರಿತು ಚರ್ಚಿಸುವಾಗ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪಾತ್ರ ಮಹತ್ವದ್ದಾಗಿದೆ. ಪ್ರತಿವರ್ಷ ವಿಜಯದಶಮಿಯ ಸಂದರ್ಭದಲ್ಲಿ ಸಂಘದ ಸ್ಥಾಪನಾ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ರಾಷ್ಟ್ರಭಕ್ತಿ, ಶಿಸ್ತು, ಸಂಘಟನಾ ಶಕ್ತಿ ಮತ್ತು ಸಮಾಜದತ್ತದ ಕರ್ತವ್ಯವನ್ನು ಸ್ಮರಿಸುವ ವಿಶೇಷ ಸಂದರ್ಭವಾಗಿದೆ.

**ಸಂಘ ಸ್ಥಾಪನೆಯ ಹಿನ್ನೆಲೆ**

ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು 1925ರ ವಿಜಯದಶಮಿಯಂದು ನಾಗಪುರದಲ್ಲಿ ಡಾ. ಕೇಶವ ಬಲಿರಾಮ ಹೆಡಗೇವಾರ್ ಅವರು ಸ್ಥಾಪಿಸಿದರು. ವ್ಯಕ್ತಿತ್ವ ನಿರ್ಮಾಣದ ಮೂಲಕ ಸಮಾಜದ ಸಂಘಟನೆ ಮತ್ತು ರಾಷ್ಟ್ರದ ಉನ್ನತಿಗೆ ಕೊಡುಗೆ ನೀಡುವುದು ಸಂಘದ ಮೂಲ ಉದ್ದೇಶಗಳಲ್ಲಿ ಒಂದಾಗಿದೆ. ಶಿಸ್ತು, ಸೇವೆ, ಸಮರ್ಪಣೆ ಮತ್ತು ಸಾಂಸ್ಕೃತಿಕ ಜಾಗೃತಿಗೆ ಒತ್ತು ನೀಡುವ ಸಂಘವು ಶಾಖೆಗಳ ಮೂಲಕ ಸ್ವಯಂಸೇವಕರಲ್ಲಿ ದೈಹಿಕ ಕ್ಷಮತೆ, ಶಿಸ್ತು ಹಾಗೂ ಸಂಘಟನಾ ಮನೋಭಾವವನ್ನು ಬೆಳೆಸಲು ಪ್ರಯತ್ನಿಸುತ್ತದೆ.

ವ್ಯಕ್ತಿ ನಿರ್ಮಾಣದಿಂದ ರಾಷ್ಟ್ರ ನಿರ್ಮಾಣದವರೆಗೆ

ಒಂದು ಸದೃಢ ರಾಷ್ಟ್ರ ನಿರ್ಮಾಣಕ್ಕೆ ಕೇವಲ ಸಂಪನ್ಮೂಲಗಳಷ್ಟೇ ಸಾಕಾಗುವುದಿಲ್ಲ; ಜವಾಬ್ದಾರಿಯುತ ನಾಗರಿಕರು, ಉತ್ತಮ ಸಂಸ್ಕಾರಗಳು ಮತ್ತು ಸಮಾಜದ ಬಗ್ಗೆ ಕಾಳಜಿಯೂ ಅಗತ್ಯ. ಈ ಹಿನ್ನೆಲೆಯಲ್ಲಿ ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಸಂಘ ಮಹತ್ವ ನೀಡುತ್ತದೆ. ಸಮಯಪಾಲನೆ, ಶಿಸ್ತು, ಪರಸ್ಪರ ಸಹಕಾರ, ನಾಯಕತ್ವದ ಗುಣ ಮತ್ತು






ಸಮಾಜದ ಹಿತಕ್ಕಾಗಿ ಕಾರ್ಯನಿರ್ವಹಿಸುವ ಮನೋಭಾವವನ್ನು ಬೆಳೆಸುವುದು ಸಂಘದ ಚಟುವಟಿಕೆಗಳ ಪ್ರಮುಖ ಉದ್ದೇಶವಾಗಿದೆ.

ರಾಷ್ಟ್ರದ ಪ್ರಗತಿಯಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಪಾಲಿದೆ. ಜಾತಿ, ಭಾಷೆ, ಪ್ರದೇಶ ಮತ್ತು ವೈಯಕ್ತಿಕ ಭಿನ್ನತೆಗಳನ್ನು ಮೀರಿ ಸಮಾಜದ ಹಿತಕ್ಕಾಗಿ ಒಟ್ಟಾಗಿ ಶ್ರಮಿಸುವ ಮನೋಭಾವವು ದೇಶದ ಏಕತೆ ಮತ್ತು ಅಭಿವೃದ್ಧಿಗೆ ಸಹಕಾರಿಯಾಗಿದೆ.

**ಸೇವೆಯೇ ಸಮಾಜದ ಶಕ್ತಿ**

ಸಮಾಜ ಸೇವೆಯು ಯಾವುದೇ ಸಂಘಟನೆಯ ಕಾರ್ಯಚಟುವಟಿಕೆಗಳಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ. ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ನೆರವು ನೀಡುವುದು, ಅಗತ್ಯವಿರುವವ–ರಿಗೆ ಸಹಾಯ ಮಾಡುವುದು, ರಕ್ತದಾನ ಶಿಬಿರಗಳು, ಆರೋಗ್ಯ ಜಾಗೃತಿ ಕಾರ್ಯಕ್ರಮಗಳು, ಸ್ವಚ್ಛತಾ ಅಭಿಯಾನಗಳು ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ವಿವಿಧ ಸ್ವಯಂಸೇವಕ ಸಂಘಟನೆಗಳು ಕೊಡುಗೆ ನೀಡುತ್ತವೆ. ರಾಷ್ಟ್ರೀಯ ಸ್ವಯಂಸೇವಕ ಸಂಘದೊಂದಿಗೆ ಸಂಬಂಧ ಹೊಂದಿರುವ ವಿವಿಧ ಸೇವಾ ಚಟುವಟಿಕೆಗಳೂ ಸಮಾಜದ ಅನೇಕ ಕ್ಷೇತ್ರಗಳಲ್ಲಿ ನಡೆಯುತ್ತವೆ.

ಸೇವೆಯ ನಿಜವಾದ ಅರ್ಥವು ಪ್ರತಿಫಲದ ನಿರೀಕ್ಷೆಯಿಲ್ಲದೆ ಸಮಾಜದ ಒಳಿತಿಗಾಗಿ ದುಡಿಯುವುದರಲ್ಲಿದೆ. ಸಂಕಷ್ಟದಲ್ಲಿರುವವರ ನೆರವಿಗೆ ಧಾವಿಸುವುದು, ದುರ್ಬಲರಿಗೆ ಬೆಂಬಲ ನೀಡುವುದು ಮತ್ತು ಸಮಾಜದಲ್ಲಿ ಪರಸ್ಪರ ವಿಶ್ವಾಸವನ್ನು ಬೆಳೆಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ.

**ಯುವಜನತೆಗೆ ಪ್ರೇರಣೆ**

ಯುವಶಕ್ತಿಯೇ ದೇಶದ ಭವಿಷ್ಯ. ಯುವಜನರಲ್ಲಿ ಶಿಸ್ತು, ಆತ್ಮವಿಶ್ವಾಸ, ನಾಯಕತ್ವ, ಸಾಮಾಜಿಕ ಜವಾಬ್ದಾರಿ ಮತ್ತು ರಾಷ್ಟ್ರದ ಬಗ್ಗೆ ಕಾಳಜಿಯನ್ನು ಬೆಳೆಸುವುದು ಇಂದಿನ ಅಗತ್ಯವಾಗಿದೆ. ಯುವಕರು ಶಿಕ್ಷಣದ ಜೊತೆಗೆ ಸಾಮಾಜಿಕ ಕಾರ್ಯಗಳಲ್ಲಿಯೂ ಪಾಲ್ಗೊಂಡಾಗ ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆ ತರಲು ಸಾಧ್ಯವಾಗುತ್ತದೆ.



ಸ್ಥಾಪನಾ ದಿನವು ಯುವಜನರು ತಮ್ಮ ಸಾಮರ್ಥ್ಯವನ್ನು ಅರಿತುಕೊಂಡು ದೇಶದ ಅಭಿವೃದ್ಧಿಗೆ ಹೇಗೆ ಕೊಡುಗೆ ನೀಡಬಹುದು ಎಂಬುದನ್ನು ಚಿಂತಿಸುವ ಸಂದರ್ಭವೂ ಆಗಿದೆ. ಸ್ವಚ್ಛತೆ, ಪರಿಸರ ಸಂರಕ್ಷಣೆ, ಶಿಕ್ಷಣದ ಮಹತ್ವ, ಸಾಮಾಜಿಕ ಸಾಮರಸ್ಯ ಮತ್ತು ಸಾರ್ವಜನಿಕ ಆಸ್ತಿಯ ರಕ್ಷಣೆಯಂತಹ ಕಾರ್ಯಗಳಲ್ಲಿ ಯುವಕರು ಸಕ್ರಿಯವಾಗಿ ಪಾಲ್ಗೊಳ್ಳಬೇಕು.

**ಸಾಮಾಜಿಕ ಸಾಮರಸ್ಯ ಮತ್ತು ರಾಷ್ಟ್ರೀಯ ಏಕತೆ**

ಭಾರತವು ಭಾಷೆ, ಧರ್ಮ, ಸಂಸ್ಕೃತಿ ಮತ್ತು ಸಂಪ್ರದಾಯಗಳ ವೈವಿಧ್ಯತೆಯಿಂದ ಕೂಡಿದ ದೇಶ. ಈ ವೈವಿಧ್ಯತೆಯ ನಡುವೆ ಪರಸ್ಪರ ಗೌರವ, ಸಹಬಾಳ್ವೆ ಮತ್ತು ಸೌಹಾರ್ದವನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ರಾಷ್ಟ್ರೀಯ ಏಕತೆ ಬಲವಾಗಬೇಕಾದರೆ ಸಮಾಜದ ಎಲ್ಲ ವರ್ಗಗಳ ನಡುವೆ ವಿಶ್ವಾಸ ಮತ್ತು ಸಹಕಾರ ವೃದ್ಧಿಯಾಗಬೇಕು.

ರಾಷ್ಟ್ರದ ಪ್ರಗತಿಯು ಸಮಾಜದ ಪ್ರತಿಯೊಬ್ಬ ವ್ಯಕ್ತಿಯ




ಪ್ರಗತಿಯೊಂದಿಗೆ ಬೆಸೆದುಕೊಂಡಿದೆ. ಆದ್ದರಿಂದ ಸೇವೆ, ಸಮಾನ ಅವಕಾಶ, ಮಾನವೀಯತೆ ಮತ್ತು ಪರಸ್ಪರ ಗೌರವದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅತ್ಯಂತ ಮುಖ್ಯವಾಗಿದೆ.

**ಸ್ಥಾಪನಾ ದಿನದ ಸಂದೇಶ**

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪನಾ ದಿನವು ಸಂಘದ ಇತಿಹಾಸವನ್ನು ಸ್ಮರಿಸುವುದರ ಜೊತೆಗೆ ರಾಷ್ಟ್ರ ಮತ್ತು ಸಮಾಜದ ಬಗ್ಗೆ ನಮ್ಮ ಕರ್ತವ್ಯಗಳನ್ನು ಪುನರ್‌ಚಿಂತನೆ ಮಾಡುವ ಸಂದರ್ಭವಾಗಿದೆ. ದೇಶದ ಅಭಿವೃದ್ಧಿ ಸರ್ಕಾರದ ಪ್ರಯತ್ನಗಳಿಂದ ಮಾತ್ರವಲ್ಲದೆ ಜವಾಬ್ದಾರಿಯುತ ನಾಗರಿಕರ ಪಾಲ್ಗೊಳ್ಳುವಿಕೆಯಿಂದಲೂ ಸಾಧ್ಯವಾಗುತ್ತದೆ. ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಿ, ಸಮಾಜದ ಒಳಿತಿಗಾಗಿ ಕೈಜೋಡಿಸಿ, ದೇಶದ ಏಕತೆ ಮತ್ತು ಅಭಿವೃದ್ಧಿಗೆ ಕೊಡುಗೆ ನೀಡಿದಾಗ ಬಲಿಷ್ಠ ಭಾರತ ನಿರ್ಮಾಣದ ಕನಸು ಸಾಕಾರವಾಗುತ್ತದೆ.

ರಾಷ್ಟ್ರಭಕ್ತಿ ಮಾತುಗಳಲ್ಲಿ ಮಾತ್ರವಲ್ಲ, ನಮ್ಮ ನಡವಳಿಕೆಯಲ್ಲಿ ಪ್ರತಿಫಲಿಸಬೇಕು. ಸೇವೆ ನಮ್ಮ ಸಂಕಲ್ಪವಾಗಲಿ, ಶಿಸ್ತು ನಮ್ಮ ಶಕ್ತಿಯಾಗಲಿ, ಸಮಾಜದ ಏಳಿಗೆ ನಮ್ಮ ಗುರಿಯಾಗಲಿ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪನಾ ದಿನವು ಇಂತಹ ಸಕಾರಾತ್ಮಕ ಸಂಕಲ್ಪಗಳನ್ನು ಬಲಪಡಿಸುವ ದಿನವಾಗಲಿ. ರಾಷ್ಟ್ರದ ಉನ್ನತಿ, ಸಮಾಜದ ಸಾಮರಸ್ಯ ಮತ್ತು ಮಾನವೀಯ ಮೌಲ್ಯಗಳ ವೃದ್ಧಿಗಾಗಿ ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡೋಣ.

ಲೇಖನ
■ ಸಂತೋಷ ಬಗಲಿ.
ವಿಜಯಪುರ



# ಬೆಳೆ ಪರಿಹಾರದ ಹೆಸರಿನಲ್ಲಿ ರೈತರಿಂದ ಹಣ ವಸೂಲಿ!



**ರೈತರು ಏಜೆಂಟ–ರ ಮಾತು ನಂಬಿ ಮೋಸ ಹೋಗದಿರಲು ಶಾಸಕ ನಾಡಗೌಡ ಎಚ್ಚರಿಕೆ**

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ರೈತರ ಬೆಳೆ ಪರಿಹಾರ ಅಥವಾ ಬೆಳೆ ವಿಮೆಯ ಹಣ ಮಂಜೂರು ಮಾಡಿಸಿಕೊಟ್ಟಿದ್ದೇವೆ ಎಂದು ಹೇಳಿಕೊಂಡು ಕೆಲವು ಏಜೆಂಟ–ರು ರೈತರಿಂದ ಹಣ ವಸೂಲಿ ಮಾಡುತ್ತಿರುವುದು ಗಮನಕ್ಕೆ ಬಂದಿದ್ದು, ಇಂತಹವರ ವಿರುದ್ಧ ಎಚ್ಚರಿಕೆಯಿಂದ ಇರಬೇಕು ಎಂದು ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಶಾಸಕ ನಾಡಗೌಡ(ಅಪ್ಪಾಜಿ) ಅವರು ರೈತರಿಗೆ ಮನವಿ ಮಾಡಿದ್ದಾರೆ.

ಬೆಳೆ ಪರಿಹಾರ ಅಥವಾ ಬೆಳೆ ವಿಮೆಯ ಹಣ ರೈತರ ಖಾತೆಗೆ ಜಮೆಯಾಗಿರುವುದಾಗಿ ಹೇಳಿ, ತಾವೇ ಹಣ ಮಂಜೂರು ಮಾಡಿಸಿಕೊಟ್ಟಿದ್ದೇವೆ ಎಂದು ನಂಬಿಸಿ ರೈತರಿಂದ ಹಣ ಪಡೆಯುತ್ತಿರುವ ಕುರಿತು ಮಾಹಿತಿ ಲಭ್ಯವಾಗಿದೆ. ಇಂತಹ ವ್ಯಕ್ತಿಗಳ ಮಾತುಗಳನ್ನು ನಂಬಿ ರೈತರು ತಮ್ಮ ಕಷ್ಟದ ದುಡಿಮೆಯ ಹಣವನ್ನು ಕಳೆದುಕೊಳ್ಳಬಾರದು ಎಂದು ಅವರು ಎಚ್ಚರಿಸಿದ್ದಾರೆ.

ಸರ್ಕಾರವು ಬೆಳೆ ಪರಿಹಾರ ವಿತರಣೆಗಾಗಿ ಯಾವುದೇ ಏಜೆಂಟರನ್ನು ನೇಮಕ ಮಾಡುವುದಿಲ್ಲ. ಅರ್ಹ ರೈತರಿಗೆ ಸರ್ಕಾರದ ನಿಯಮಗಳ ಪ್ರಕಾರ ದೊರೆಯಬೇಕಾದ ಪರಿಹಾರದ ಹಣ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮೆಯಾಗುತ್ತದೆ. ಹೀಗಾಗಿ, ಪರಿಹಾರದ ಹಣ ಕೊಡಿಸುವ ನೆಪದಲ್ಲಿ ಯಾರಾದರೂ ಹಣಕ್ಕೆ ಬೇಡಿಕೆ ಇಟ್ಟರೆ ರೈತರು ಅಂತಹವರನ್ನು ನಂಬಬಾರದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ರೈತರನ್ನು ವಂಚಿಸುವ ಇಂತಹ ಏಜೆಂಟರ ಹಾವಳಿಯನ್ನು ನಿಯಂತ್ರಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲು ಸಜ್ಜಾಗಿದೆ. ಯಾರಾದರೂ ತಪ್ಪು ಮಾಹಿತಿ ನೀಡಿ ಅಥವಾ ಹಣ ಮಂಜೂರು ಮಾಡಿಸಿಕೊಡುವುದಾಗಿ ಆಮಿಷವೊಡ್ಡಿ ಹಣ ವಸೂಲಿ ಮಾಡಲು ಮುಂದಾದರೆ, ರೈತರು ತಕ್ಷಣವೇ ಸಮೀಪದ ಪೊಲೀಸ್ ಠಾಣೆಗೆ ದೂರು ಸಲ್ಲಿಸಬೇಕು ಎಂದು ಶಾಸಕ ನಾಡಗೌಡ ಅವರು ಪತ್ರಿಕಾ ಪ್ರಕಟಣೆಯ ಮೂಲಕ ಎಚ್ಚರಿಕೆ ನೀಡಿದ್ದಾರೆ.

ರೈತರು ಯಾವುದೇ ಮಧ್ಯವರ್ತಿಗಳಿಗೆ ಹಣ ನೀಡದೆ, ಬೆಳೆ ಪರಿಹಾರ ಮತ್ತು ಬೆಳೆ ವಿಮೆಗೆ ಸಂಬಂಧಿಸಿದ ಮಾಹಿತಿಯನ್ನು ಅಧಿಕೃತ ಮೂಲಗಳಿಂದ ಪಡೆದುಕೊಳ್ಳಬೇಕು. ವಂಚನೆಗೆ ಒಳಗಾಗದಂತೆ ಜಾಗರೂಕರಾಗಿರಬೇಕು ಎಂದು ಅವರು ಮನವಿ ಮಾಡಿದ್ದಾರೆ.

# ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆ



■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಕನ್ನಡಪರ ಸೇರಿದಂತೆ ಪಟ್ಟಣದ ಎಲ್ಲ ಪ್ರಗತಿಪರ ಸಂಘಟನೆಗಳ ಸಹಕಾರದಿಂದ ಕನ್ನಡ ರಾಜ್ಯೋತ್ಸವವನ್ನು ಅದ್ದೂ–ರಿಯಾಗಿ ಆಚರಿಸೋಣ ಎಂದು ತಹಶೀಲ್ದಾರ ನಿಂಗಣ್ಣ ಬಿರಾದಾರ ಹೇಳಿದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ಸೋಮವಾರ ಜರುಗಿದ ಕನ್ನಡ ರಾಜ್ಯೋತ್ಸವ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್, ಕರ್ನಾಟಕ ರಕ್ಷಣಾ ವೇದಿಕೆ, ಜಯಕರ್ನಾಟಕ ಸಹಿತ ವಿವಿಧ ಸಂಘಟನೆಗಳ ಸಲಹೆ ಸೂಚನೆಗಳನ್ನು ಪಾಲಿಸುವ ಮೂಲಕ ಕನ್ನಡ ನಾಡು, ನುಡಿಗೆ ಸೇವೆ ಸಲ್ಲಿಸಿದ ಪ್ರಮುಖರು ಹಾಗೂ ವಿವಿಧ ರಂಗಗಳ ಸಾಧಕರು ಸೇರಿದಂತೆ ಕನ್ನಡ ಭಾಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸುವ ಕಾರ್ಯ ಜರುಗಲಿದೆ. ಜೊತೆಗೆ ಮುಖ್ಯವಾಗಿ ವಿವಿಧ ಶಾಲೆಗಳ ವಿದ್ಯಾರ್ಥಿಗಳಿಂದ ಕೂಡಿದ ಮೆರವಣಿಗೆ, ವೇದಿಕೆ ಕಾರ್ಯಕ್ರಮಗಳ ಮೂಲಕ ಅವಿಸ್ಮರಣೀಯ ಹಾಗೂ ವಿಶಿಷ್ಟವಾಗಿ ಆಚರಿಸೋಣ ಎಂದರು.

ಸಭೆಯಲ್ಲಿ ನಿವೃತ್ತ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸಿ.ಕೆ.ಕುದರಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿದ್ದು ಮೇಲಿನಮನಿ, ಶಿಕ್ಷಕರಾದ ಜಿ.ಪಿ.ಬಿರಾದಾರ, ಸದಾಶಿವ ಗುಡಿಮನಿ, ಅರುಣ ಕೋರವಾರ, ಕನ್ನಡಪರ ಸಂಘಟನೆಗಳ ರಹಿಮಾನ ಕಣಕಾಲ, ಶಿವರಾಜ ತಳವಾರ ಮಾತನಾಡಿದರು.

ತಾಲ್ಲೂಕು ಪಂಚಾಯಿತಿ ಇಒ ಭಾರತಿ ಚೆಲುವಯ್ಯ, ಸಿಂದಗಿ ಬಿಇಒ ಟಿ.ಎಸ್.ಆಲಗೂರ, ಶಿರಸ್ತೇದಾರ ಸುರೇಶ ಮ್ಯಾಗೇರಿ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಅಫ್ರೋಜ್ ಅಹ್ಮದ್ ಪಟೇಲ, ಪಿಎಸ್‌ಐ ಸಚೀನ ಆಲಮೇಲಕರ, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸಿ.ಬಿ.ಗಡಗಿ, ಜಯ ಕರ್ನಾಟಕ ಸಂಘಟನೆಯ ಹಸನ್ ನದಾಫ್, ಪಂಚಾಕ್ಷರಿ ಮಿಂಚನಾಳ, ರಾಮು ರಾಠೋಡ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಸಂಘಟನೆಗಳ ಪ್ರಮುಖರು, ಸಿಬ್ಬಂದಿ ಇದ್ದರು.

# ಸಂಘಟಿತರಾಗಿ ದೇಶ ಕಟ್ಟಲು ಮುಂದಾಗಿ : ಕೃಷ್ಣಾಜಿ ಜೋಶಿ

## ಕಲಕೇರಿಯಲ್ಲಿ ಗಮನ ಸೆಳೆದ ಆರ್‌ಎಸ್‌ಎಸ್ ಪಥಸಂಚಲನ । ರಾಷ್ಟ್ರೀಯ ಸ್ವಯಂಸೇವಕ ಸಂಘದ 101ನೇ ವರ್ಷ ಮತ್ತು ವಿಜಯದಶಮಿ ನಿಮಿತ್ಯವಾಗಿ ನಡೆದ ಪಥ ಸಂಚಲನ

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ಹಲವು ವೈವಿಧ್ಯಮಯ ಭಾಷೆ, ನೆಲ, ಜಲ, ನಿಸರ್ಗದಲ್ಲಿ ಬದುಕುತ್ತಿರುವ ನಮ್ಮ ದೇಶವಾಸಿಗಳು ಹಲವು ಮತ ಪಂಥಗಳ ಮಧ್ಯೆಯೂ ಸಾಮರಸ್ಯದ ಬದುಕನ್ನು ರೂಢಿಸಿಕೊಂಡು ಸ್ವದೇಶಿ ಜೀವನಶೈಲಿಯನ್ನು ಅಳವಡಿಸಿಕೊಂಡು ನಮ್ಮ ಸಂಸ್ಕೃತಿ ಪರಂಪರೆಯನ್ನು ಆಚರಿಸುತ್ತಾ ವಿದೇಶಿ ಸಂಸ್ಕೃತಿಗೆ ಮಾರುಹೋಗದೇ ಸ್ವಾವಲಂಬಿಗಳಾಗಿ, ಸಂಘಟಿತರಾಗಿ ದೇಶವನ್ನು ಕಟ್ಟುವ ಕಾರ್ಯದಲ್ಲಿ ತೊಡಗಿಸಿಕೊಂಡು ಸಂಘಕ್ಕೆ ಬಲ ತುಂಬುವ ಮೂಲಕ ಸುಭದ್ರ ದೇಶ ಕಟ್ಟಲು ಮುಂದಾಗಬೇಕಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಲಬುರಗಿಯ ಕರ್ನಾಟಕ ಉತ್ತರ ಪ್ರಾಂತದ ಪ್ರಚಾರ ಪ್ರಮುಖರಾದ ಕೃಷ್ಣಾಜಿ ಜೋಶಿ ಹೇಳಿದರು.

ರವಿವಾರರಂದು ಕಲಕೇರಿ ಗ್ರಾಮದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ 101ನೇ ವರ್ಷ ಮತ್ತು ವಿಜಯದಶಮಿ ನಿಮಿತ್ಯವಾಗಿ ನಡೆದ ಪಥ ಸಂಚಲನದ ಬಳಿಕ ಶ್ರೀಗುರು ಮಡಿವಾಳೇಶ್ವರ ದೇವಸ್ಥಾನದ ಮುಂಭಾಗ ಮುಖ್ಯ ಆವರಣದಲ್ಲಿ ನಡೆದ ಬೌಧಿಕ ಕಾರ್ಯಕ್ರಮದ ಮುಖ್ಯ ವಕ್ತಾರರಾಗಿ ಭಾಗವಹಿಸಿ ಅವರು ಮಾತನಾಡಿದರು. ನೀತಿ ಮಾರ್ಗದ ಬದುಕೇ ಧರ್ಮ, ಸಕಲ ಜೀವಾತ್ಮರಿಗೆ ಒಳಿತನ್ನು ಬಯಸುವುದೇ ಧರ್ಮವಾಗಿದ್ದು, ಹಿಂದೂ ಎಂದರೆ ಯಾರು ಹಿತವನ್ನು ಬಯಸುತ್ತಾರೋ ಮತ್ತು ದುರ್ಗುಣಗಳನ್ನು, ದುರ್ನೀತಿ, ದುರಾಲೋಚನೆಯನ್ನು ಮಾಡದೇ ಇರುವ ಸರ್ವರಿಗೂ ಒಳಿತನ್ನೇ ಬಯಸುವವರೇ ಹಿಂದೂಗಳಾಗಿದ್ದಾರೆ. ಈ ದಿಸೆಯಲ್ಲಿ ಈ ನಾಡಿನಲ್ಲಿ ಬದುಕುತ್ತಿರುವ ಪ್ರತಿಯೊಬ್ಬರೂ ಪರಸ್ಪರ ಜಾತಿ, ಮತಭೇದಗಳನ್ನು ತೊರೆದು ಭಾತೃತ್ವ, ಸಹಬಾಳ್ವೆಯ ಮೂಲಕ ದ್ವೇಷ ಅಸೂಯೆ ಭಾವನೆಗಳನ್ನು ಬಿಟ್ಟು ದೇಶದ ಒಳಿತಿಗಾಗಿ ಸಂಘಟಿತರಾಗಿ ಮುನ್ನಡೆಯಬೇಕು ಎಂದರು.



ನೂರಾರು ರಾಷ್ಟ್ರೀಯ ಸ್ವಯಂಸೇವಕ ಗಣವೇಷಧಾರಿಗಳು ಪಾಲ್ಗೊಂಡಿದ್ದ ಭವ್ಯ ಪಥ–'ಸಂಚಲನವು ಗ್ರಾಮದ ಶ್ರೀ ಯಲ್ಲಾಲಿಂಗ ದೇವಸ್ಥಾನದಿಂದ ಮದ್ಯಾಹ್ನ 4:15ಕ್ಕೆ ಪ್ರಾರಂಭವಾದ ಪಥಸಂಚಲನವು ಬಸ್‌ನಿಲ್ದಾಣದ ಪಕ್ಕದ ಮಾರ್ಗವಾಗಿ ಸಾಗಿ ಅಗಸಿ ಪರ್ವತ ದೇವರ ದೇವಸ್ಥಾನ, ಶ್ರೀ ವೆಂಕಟರಮಣ ದೇವಸ್ಥಾನದ ಮುಂಭಾಗದ ರಸ್ತೆಯಿಂದ ರಾಂಪೂರ ರಸ್ತೆ, ಶ್ರೀ ಹನುಮಾನ ದೇವಸ್ಥಾನ, ಶ್ರೀ ಭವಾನಿ ದೇವಸ್ಥಾನದ ಮಾರ್ಗವಾಗಿ ಅಕ್ಕಮಹಾದೇವಿ ದೇವಸ್ಥಾನದಿಂದ ಲಕ್ಷ್ಮಿ ದೇವಸ್ಥಾನ, ಶ್ರೀ ಮಡಿವಾಳೇಶ್ವರ ದೇವಸ್ಥಾನದ ಮುಂಭಾಗದಿಂದ ಶ್ರೀ ಬಸವೇಶ್ವರ ಕಾಲೇಜಿನ ರಸ್ತೆಯ ಮಾರ್ಗವಾಗಿ ಸಂಚರಿಸಿ ಪೋಲಿಸ್ ಠಾಣೆಯ ಮುಂಭಾಗದ ಮುಖ್ಯರಸ್ತೆ ಮೂಲಕ ಶ್ರೀಗುರು ವೀರಘಂಟೈ ಮಡಿವಾಳೇಶ್ವರ ದೇವಸ್ಥಾನದ ಮುಂಭಾಗದ ಆವರಣಕ್ಕೆ ಬಂದು ತಲುಪಿದ ನಂತರ ಸಾರ್ವಜನಿಕ ಸಭೆ ನಡೆಯಿತು.

ಗಣವೇಷಧಾರಿಗಳು ಸಾಗುವ ಮಾರ್ಗವನ್ನು ಮನೆಗಳ ಮುಂದೆ ಹಾಗೂ ಪ್ರಮುಖ ರಸ್ತೆಗಳಲ್ಲಿ ರಂಗೋಲಿ, ಹೂ ಹಾಕಿ ಶೃಂಗರಿಸಲಾಗಿತ್ತು, ದಾರಿಯುದ್ದಕ್ಕೂ ಸಾರ್ವಜನಿಕರು ಗಣವೇಷಧಾರಿಗಳಿಗೆ ಪುಷ್ಪ ಮಳೆ ಸು–ರಿದು ಭಕ್ತಿ ಸಮರ್ಪಿಸಿದರು. ವೀರ ಮಹಾಪುರುಷರ ವೇಷ ಭೂಷಣ ಧರಿಸಿದ ಮಕ್ಕಳು ಗಮನ ಸೇಳೆದರು.

ಮುಖ್ಯ ಅತಿಥಿಗಳಾಗಿ ಗ್ರಾಮದ ಹಿರಿಯ ಮುಖಂಡರಾದ ನ್ಯಾಮದೇವ ಕನಕಪ್ಪ ವಡ್ಡರ ಅವರು ಭಾಗವಹಿಸಿದ್ದರು ಮತ್ತು ಕಲಕೇರಿ ಸೇರಿದಂತೆ ತಾಳಿಕೋಟೆ ತಾಲೂಕಿನ ನೂರಾರು ಗಣವೇಷಧಾರಿಗಳು ಮತ್ತು ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಸತ್ಯ ಶುದ್ಧ ಕಾಯಕ ಮಾಡಿ ದೇವಿಯ ಕೃಪೆಗೆ ಪಾತ್ರರಾಗಿ

■ ಉದಯರಶ್ಮಿ ದಿನಪತ್ರಿಕೆ

ಕಲಕೇರಿ: ಮನುಷ್ಯ ಜೀವನದಲ್ಲಿ ಎದುರಾಗುವ ಎಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಎದೆಗುಂದದೇ, ಅನ್ಯ ಮಾರ್ಗದಲ್ಲಿ ನಡೆಯದೇ ದೇವರಲ್ಲಿ ಅಚಲ ನಂಬಿಕೆಯನಿಟ್ಟು ಸತ್ಯ ಶುದ್ಧ ಕಾಯಕ ಮಾಡಿದಾಗ ದೇವಿಯ ಕೃಪೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ ಎಂದು ದೇವರಹಿಪ್ಪರಗಿ ಮತಕ್ಷೇತ್ರದ ಶಾಸಕರಾದ ರಾಜುಗೌಡ ಪಾಟೀಲ ಕುದ–ರಿಸಾಲವಾಡಗಿ ಅವರು ಹೇಳಿದರು.



ಗ್ರಾಮದ ದುರ್ಗಾದೇವಿ ದೇವಸ್ಥಾನದಲ್ಲಿ ದುರ್ಗಾದೇವಿ ಪುರಾಣ ಮಹಾಂಗಲೋತ್ಸವ ಮತ್ತು ಧರ್ಮಸಭೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾಡಿನಾದ್ಯಂತ ಶ್ರದ್ಧಾ ಭಕ್ತಿಯಿಂದ ಶರನ್ ನವರಾತ್ರಿ ಅಂಗವಾಗಿ ದೇವಿಯನ್ನು ಆರಾಧಿಸಲಾಗುತ್ತಿದ್ದು, ಬರಗಾಲದಿಂದ ತತ್ತರಿಸಿರುವ ಈ ನಾಡಿಗೆ ದೇವಿ ಕೃಪೆಯಿಂದ ಒಳ್ಳೆಯ ಮಳೆ, ಬೆಳೆಯಾಗಲಿ, ರೈತರ ಕಷ್ಟಗಳೆಲ್ಲ ದೂರವಾಗಲಿ, ಜನರ ಬದುಕು ಹಸನಾಗಲಿ, ಲೋಕ ಕಲ್ಯಾಣವಾಗಲಿ ಎಂದು ದುರ್ಗಾದೇವಿಯಲ್ಲಿ ವಿಶೇಷವಾಗಿ ಪ್ರಾರ್ಥನೆ ಸಲ್ಲಿಸಿದರು.

ವಿಶೇಷ ಉಪನ್ಯಾಸಕರಾಗಿ ಆಗಮಿಸಿದ ಸಾಹಿತಿಗಳು ಮತ್ತು ವಿಜಯಪುರ ಸಿಕ್ಯಾಬ್ ಮಹಿಳಾ ಪಿಯು ಕಾಲೇಜಿನ ಉಪನ್ಯಾಸಕರಾದ ಪ್ರೊ. ಉಮರಶ–ರೀಫ ಕುಂಟೋಜಿ ಅವರು ಮಾತನಾಡಿ ಮನುಷ್ಯ ಮನುಷ್ಯನಿಗಾಗಿ ತುಡಿಯುವುದು, ಪ್ರತಿಯೊಬ್ಬರೂ ಪ್ರೀತಿ ಆದರಗಳಿಂದ ಸಾಮರಸ್ಯದ ಬದುಕನ್ನು ನಡೆಸುವುದು ಆ ಮೂಲಕ ವಿಶ್ವ ಬ್ರಾತೃತ್ವವನ್ನು ಸಾಧಿಸುವುದೇ ಎಲ್ಲ ಧರ್ಮಗಳ ಸಾರವಾಗಿದ್ದು, ದೇವಿಯ ಪುರಾಣದಲ್ಲಿ ಬರುವ ಅಸುರರ ಸಂಹಾರ ಅದು ನಮ್ಮ ದೇಹದಲ್ಲಿರುವ ಅರಿಷಡ್‌ವರ್ಗಗಳ ಸಂಹಾರವೇ ಆಗಿದ್ದು, ನಮ್ಮಲ್ಲಿರುವ ದುರ್ಗುಣಗಳನ್ನು ಸಂಹರಿಸಿ ಸದ್ಗುಣ ಸಂಪನ್ನರಾಗಿ ಜೀವನ ನಡೆಸಿ ಮುಕ್ತಾತ್ಮರಾಗುವುದೇ ನಿಜವಾದ ದೇವಿಯ ಪುರಾಣದ ಸಾರವಾಗಿದ್ದು, ಎಲ್ಲರು ಇದನ್ನ–ರಿತು ನಡೆಯಬೇಕಿದೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಬಸನಗೌಡ ಎಸ್ ಪಾಟೀಲ ಯಡಿಯಾಪೂರ, ವಾಯ್ ಬಿ ಕುಲಕರ್ಣಿ, ಡಾ.ವ್ಹಿ.ಕೆ.ಜಾಲಹಳ್ಳಿಮಠ, ಆರ್ ಜಿ ಗುಮಶೆಟ್ಟಿ ಅವರು ಮಾತನಾಡಿದರು.

ಒಂಭತ್ತು ದಿನಗಳ ಕಾಲ ದುರ್ಗಾದೇವಿಯ ಪುರಾಣವನ್ನು ಹೇಳಿದ ಕೊಮ್ಮನೂರಿನ ನಾಗಭೂಷಣ ಶಾಸ್ತ್ರಿಗಳು ಪುರಾಣ ಮಹಾಮಂಗಲದ ಪ್ರಯುಕ್ತ ಜೀವನಮುಕ್ತಿಸಾರ ಸಂದೇಶವನ್ನು ಹೇಳಿದರು, ರಾಜು ಬುಯ್ಯಾರ ಮತ್ತು ಸದ್ದೇಶಕುಮಾರ ಹೂಗಾರ ಅವರು ನಡೆಸಿಕೊಟ್ಟ ಸಂಗೀತ ಸೇವೆ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಪಂಚರಂಗ ಸಂಸ್ಥಾನ ಗದ್ದುಗೆಮಠದ ಮಡಿವಾಳೇಶ್ವರ ಶಿವಾಚಾರ್ಯರು ಸಾನಿಧ್ಯವಹಿಸಿದ್ದರು, ತಿಳಗೂಳ ಬ್ರಹ್ಮವಿದ್ಯಾಶ್ರಮದ ಮಹೇಶ್ವರಾನಂದಜೀ ಮಹಾಸ್ವಾಮಿಗಳು ಅಧ್ಯಕ್ಷತೆವಹಿಸಿದ್ದರು, ಶರಬಯ್ಯ ಗದ್ದುಗೆಮಠ, ಈರಯ್ಯ ಚಿಕ್ಕಮಠ, ಶಿವಾನಂದ ಬಸವರಾಜ ಶಿಲ್ಪಿ ಅವರು ನೇತೃತ್ವವಹಿಸಿದ್ದರು, ಹಿರಿಯರಾದ ಬಸವರಾಜ ಚಿಕ್ಕಮಠ, ಎಸ್.ಬಿ.ಪಾಟೀಲ, ಸಂಗಮನಾಥ ದೇಸಾಯಿ, ಶ್ರೀಶೈಲ ವಿಶ್ವಕರ್ಮ, ವೀರೇಶ ಸರಗಣಾಚಾರಿ, ಜಹಾಂಗೀರಬಾಶಾ ಸಿರಸಗಿ, ಸಹಕಾರಿ ಇಲಾಖೆಯ ಕನಕರಾಜ ವಡ್ಡರ, ವಿಜಯಪುರದ ಸಂಗನಗೌಡ ಪಾಟೀಲ, ಉಪನ್ಯಾಸಕರಾದ ಜಗದೀಶ ಸಾತಿಹಾಳ, ಪ್ರಶಾಂತ ಸುಣಗಾರ ಸಿಂದಗಿ, ಪ್ರಭುಗೌಡ ಬಿರಾದಾರ ಅಸ್ಕಿ, ಶರಣಪ್ಪ ಮೋಪಗಾರ, ಪಿಕೆಪಿಎಸ್ ಅಧ್ಯಕ್ಷರಾದ ರುದ್ರಪ್ಪ ಗುಮಶೆಟ್ಟಿ, ಕುಮಾರ ದೇಸಾಯಿ, ಶಿವಪುತ್ರ ಸಾತಿಹಾಳ, ಕಂಠೀರವ ದೇಸಾಯಿ, ಪ್ರವೀಣ ಜಗಶೆಟ್ಟಿ, ಹಣಮಂತ ವಡ್ಡರ, ನಿತ್ಯಾನಂದ ಕತ್ತಿ, ಸುನೀಲಗೌಡ ಪಾಟೀಲ ಸೇರಿದಂತೆ ಇತರರು ಇದ್ದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR